IslamHouse.com

# ಮಕ್ಕಾ ಹರಮ್

## ಮತ್ತು ಅದರಲ್ಲಿರುವ ದುಪ್ಪಟ್ಟು ಪ್ರತಿಫಲಗಳು

## الحرم المكي ومضاعفة الأجر فيه

< الكنادي >

ಶೈಖ್ ಅಬ್ದುಲ್ಲತೀಫ್ ಇಬ್ನ್ ಅವದ್ ಅಲ್‌ಕರ್ನೀ

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ಪರಿಶೀಲನೆ: ಅಬೂಬಕರ್ ನಝೀರ್ ಸಲಫಿ

IslamHouse.com

# الحرم المكي ومضاعفة الأجر فيه

الشيخ عبد اللطيف بن عوض القرني

ترجمة: محمد حمزة البتوري

مراجعة: أبو بكر نذير السلفي

# ಪ್ರಸ್ತಾವನೆ

ಸ್ಥಳಗಳ ಪೈಕಿ ಅತಿಶ್ರೇಷ್ಠವಾದುದು ಅಲ್‌ಬಲದುಲ್ ಹರಾಮ್ ಎಂದು ಕರೆಯಲಾಗುವ ಮಕ್ಕಾ ಮುಕರ್‍ರಮಃ. ಅಲ್ಲಾಹು ಅದನ್ನು ಅನೇಕ ಶ್ರೇಷ್ಠತೆಗಳ ಮತ್ತು ಅನೇಕ ವೈಶಿಷ್ಟ್ಯಗಳ ಮೂಲಕ ವಿಶೇಷಗೊಳಿಸಿದ್ದಾನೆ. ಅದನ್ನು ಇತರ ಸ್ಥಳಗಳಿಂದ ವೈಶಿಷ್ಟ್ಯಗೊಳಿಸುವಂತಹ ಅನೇಕ ನಿಯಮಗಳನ್ನು ನಿಶ್ಚಯಿಸಿದ್ದಾನೆ. ಆದ್ದರಿಂದ ಮಕ್ಕಾ ಹರಮ್‌ಗೆ ಸಂಬಂಧಿಸಿದ ಕೆಲವು ನಿಯಮಗಳನ್ನು ವಿವರಿಸಿಕೊಡಬೇಕಾದ ಅಗತ್ಯವಿದೆ. ವಿಶೇಷವಾಗಿ ಅಲ್ಲಿ ಲಭ್ಯವಾಗುವ ದುಪ್ಪಟ್ಟು ಪ್ರತಿಫಲಗಳನ್ನು. ಇದನ್ನು ವಿವರಿಸುವುದಕ್ಕೆ ಮುಂಚೆ ಹರಮ್ ಎಂದರೇನು? ಅದರ ಗಡಿಗಳು ಎಲ್ಲಿವೆ? ಅದರ ಶ್ರೇಷ್ಠತೆಗಳೇನು? ಮುಂತಾದವುಗಳನ್ನು ನಾವು ಅರಿಯಬೇಕಾಗಿದೆ.

# ಹರಮ್ ಮತ್ತು ಅದರ ಹೆಸರುಗಳು

'ಹರಮ್' (الْحَرَم) ಎಂಬ ಹೆಸರು ಅಲ್ಲಾಹನ ಗ್ರಂಥದಲ್ಲಿ ಮತ್ತು ಪ್ರವಾದಿ(ﷺ)ರವರ ಸುನ್ನತ್ತಿನಲ್ಲಿ ಬಂದಿದೆ. 'ಹರಮ್' ಎಂಬ ಪದವನ್ನು ಅನಿರ್ಬಂಧಿತವಾಗಿ ಪ್ರಯೋಗಿಸುವಾಗ ಅದರ ಉದ್ದೇಶವು ಮಕ್ಕಾ ಹರಮ್ ಆಗಿದೆ. ಅದು ಅಲ್ಲಾಹು ಮತ್ತು ಅವನ ರಸೂಲ್(ﷺ)ರವರ ಹರಮ್ ಆಗಿದೆ. 'ಹರಮ್' ಅನ್ನು ಕೆಲವೊಮ್ಮೆ 'ಹರಾಮ್' ಎಂದೂ ಕರೆಯಲಾಗುತ್ತದೆ. ಕಾಲವನ್ನು 'ಝಮನ್' ಮತ್ತು 'ಝಮಾನ್' ಎಂದು

ಕರೆಯುವಂತೆ. ಅದೇ ರೀತಿ ಮಕ್ಕಾ ಹರಮ್ ಅನ್ನು 'ಮುಹರ್ರಮ್' ಎಂದು ಕೂಡ ಹೇಳಲಾಗುತ್ತದೆ. [ಲಿಸಾನುಲ್ ಅರಬ್ 4/95]

## ಎರಡು ಹರಮ್‌ಗಳು

ಎರಡು ಹರಮ್‌ಗಳು (الْحَرَمَانِ) ಎಂದು ಹೇಳುವಾಗ ಅದರ ಉದ್ದೇಶವು ಮಕ್ಕಾ ಹರಮ್ ಮತ್ತು ಮದೀನಾ ಹರಮ್‌ಗಳು. ಇದರ ಬಹುವಚನ 'ಅಹ್ರಾಮ್' (أَحْرَام).

## ಮಕ್ಕಾ ಹರಮ್ ಮತ್ತು ಅಲ್‌ಮಸ್ಜಿದುಲ್ ಹರಾಮ್‌ನ ಮಧ್ಯೆಯಿರುವ ವ್ಯತ್ಯಾಸ

'ಅಲ್‌ಮಸ್ಜಿದುಲ್ ಹರಾಮ್' ಎಂಬ ಹೆಸರು ಅಲ್ಲಾಹನ ಗ್ರಂಥದಲ್ಲಿ ಸುಮಾರು ಹದಿನೈದು ಸ್ಥಳಗಳಲ್ಲಿ ಬಂದಿದೆ. 'ಅಲ್‌ಮಸ್ಜಿದುಲ್ ಹರಾಮ್' ಎಂದು ಹೇಳಿರುವುದರ ಉದ್ದೇಶವೇನು ಎಂಬ ಬಗ್ಗೆ ಉಲಮಾಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ಅಭಿಪ್ರಾಯಗಳನ್ನು ಇಬ್ನುಲ್ ಕಯ್ಯಿಮ್ 'ಅಹ್ಕಾಮು ಅಹ್ಲಿ ದ್ದಿಮ್ಮಃ' ಎಂಬ ಗ್ರಂಥದಲ್ಲಿ (1/189) ಹೀಗೆ ವ್ಯಕ್ತಪಡಿಸುತ್ತಾರೆ:

الْمَسْجِدُ الْحَرَامُ يُرَادُ بِهِ فِي كِتَابِ اللَّهِ ثَلَاثَةُ أَشْيَاءَ : نَفَسُ الْبَيْتِ ، وَالْمَسْجِدُ الَّذِي حَوْلَهُ ، وَالْحَرَمُ كُلُّهُ.

**"ಅಲ್ಲಾಹನ ಗ್ರಂಥದಲ್ಲಿರುವ ಅಲ್‌ಮಸ್ಜಿದುಲ್ ಹರಾಮ್ ಎಂಬ ಪದದಿಂದ ಮೂರು ವಸ್ತುಗಳನ್ನು ಉದ್ದೇಶಿಸಲಾಗುತ್ತದೆ: ಕಅ್‌ಬಾ, ಅದರ ಸುತ್ತಲಿರುವ ಮಸೀದಿ ಮತ್ತು ಸಂಪೂರ್ಣ ಹರಮ್."**

ಇಮಾಮ್ ಅನ್ನವವೀ ತಮ್ಮ 'ಅಲ್‌ಮಜ್ಮೂಅ್'ನಲ್ಲಿ (3/189) ನಾಲ್ಕನೆಯ ಅಭಿಪ್ರಾಯವಾಗಿ ಮಕ್ಕಾ ಪಟ್ಟಣವನ್ನು ಸೇರಿಸಿದ್ದಾರೆ.

## ಹರಮ್‌ನ ಗಡಿಗಳು

ಹರಮ್‌ನ ಗಡಿಗಳನ್ನು ಅರಿತುಕೊಳ್ಳುವುದು ಅತ್ಯಾವಶ್ಯಕ. ಯಾಕೆಂದರೆ ಅನೇಕ ನಿಯಮಗಳು ಅವುಗಳೊಂದಿಗೆ ಸಂಬಂಧ ಹೊಂದಿವೆ. ಇಮಾಮ್ ಅನ್ನವವೀ ಹೇಳುತ್ತಾರೆ:

وَاعْلَمْ أَنَّ مَعْرِفَةَ حُدُودِ الْحَرَمِ مِنْ أَهَمِّ مَا يَنْبَغِي أَنْ يُعْتَنَى بِبَيَانِهِ ، فَإِنَّهُ يَتَعَلَّقُ بِهِ أَحْكَامٌ كَثِيرَةٌ.

**"ಅರಿತುಕೋ! ಹರಮ್‌ನ ಗಡಿಗಳ ಬಗ್ಗೆಯಿರುವ ಅರಿವು, ವಿವರಿಸಿಕೊಡುವುದು ಅವಶ್ಯಕವಾಗಿರುವ ಪ್ರಮುಖ ವಿಚಾರಗಳಲ್ಲಿ ಸೇರಿದ್ದು. ಯಾಕೆಂದರೆ ಅನೇಕ ನಿಯಮಗಳು ಅದರೊಂದಿಗೆ ಸಂಬಂಧ ಹೊಂದಿವೆ." [ತಹ್ದೀಬುಲ್ ಅಸ್ಮಾಇ ವಲ್ಲುಗಾತ್ 3/1/82]**

ಮಕ್ಕಾ ಹರಮ್ ಕುರ್‌ಆನ್, ಸುನ್ನತ್ ಮತ್ತು ಇಜ್ಮಾಅ್‌ನಲ್ಲಿ ದೃಢಪಟ್ಟಿದೆ. ಮೌಲಿಕವಾಗಿ, ಅದರ ಗಡಿಗಳನ್ನು ನಿಶ್ಚಯಿಸುವುದು 'ತೌಕೀಫ್' ಆಗಿದೆ (ಅಂದರೆ ಅಲ್ಲಾಹು ಮತ್ತು ರಸೂಲ್(ﷺ)ರವರು

ಹೇಳಿದ್ದಕ್ಕೆ ಸೀಮಿತ). ಖಲೀಲುಲ್ಲಾಹಿ ಇಬ್ರಾಹೀಮ್(ﷺ)ರವರು ಮಕ್ಕಾ ಹರಮ್‌ಗೆ ಗಡಿಗಳನ್ನು ನಿಶ್ಚಯಿಸಿದ ಬಳಿಕ ಅದರ ವಿಷಯದಲ್ಲಿ ಇಜ್ತಿಹಾದ್ ಮಾಡಲು ಯಾರಿಗೂ ಅವಕಾಶವಿಲ್ಲ.

ಮಕ್ಕಾವನ್ನು ಹರಮ್ ಎಂದು ಘೋಷಿಸಲಾದದ್ದು ಯಾವಾಗ ಎಂಬ ಬಗ್ಗೆ ಉಲಮಾಗಳಿಗೆ ಭಿನ್ನಾಭಿಪ್ರಾಯವಿದೆ. ಸರಿಯಾದ ಅಭಿಪ್ರಾಯ ಪ್ರಕಾರ ಅಲ್ಲಾಹು ಆಕಾಶಗಳನ್ನು ಮತ್ತು ಭೂಮಿಯನ್ನು ಸ್ಥಾಪಿಸಿದ ದಿನದಿಂದಲೇ ಮಕ್ಕಾವನ್ನು ಹರಮ್ ಎಂದು ಘೋಷಿಸಲಾಗಿದೆ. ಯಾಕೆಂದರೆ ಅಲ್‌ಬುಖಾರೀ ಮತ್ತು ಮುಸ್ಲಿಮ್ ವರದಿ ಮಾಡಿದ ಇಬ್ನ್ ಅಬ್ಬಾಸ್(ﷺ)ರವರ ಹದೀಸಿನಲ್ಲಿ ಅಲ್ಲಾಹನ ರಸೂಲ್(ﷺ)ರವರು ಹೇಳುತ್ತಾರೆ:

{إِنَّ هَذَا الْبَلَدَ حَرَّمَهُ اللَّهُ يَوْمَ خَلَقَ السَّمَاوَاتِ وَالْأَرْضَ فَهُوَ حَرَامٌ بِحُرْمَةِ اللَّهِ إِلَى يَوْمِ الْقِيَامَةِ ، وَإِنَّهُ لَمْ يَحِلَّ الْقِتَالُ فِيهِ لِأَحَدٍ قَبْلِي ، وَلَمْ يَحِلَّ لِي إِلَّا سَاعَةً مِنْ نَهَارٍ فَهُوَ حَرَامٌ بِحُرْمَةِ اللَّهِ إِلَى يَوْمِ الْقِيَامَةِ }

متَّفقٌ عليهِ.

**"ಖಂಡಿತವಾಗಿಯೂ ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದ ದಿನದಂದೇ ಅಲ್ಲಾಹು ಈ ಪಟ್ಟಣವನ್ನು (ಮಕ್ಕಾವನ್ನು) ಪವಿತ್ರಗೊಳಿಸಿದ್ದಾನೆ (ಹರಮ್ ಆಗಿ ಮಾಡಿದ್ದಾನೆ). ಆದ್ದರಿಂದ ಅಲ್ಲಾಹನ ಪಾವಿತ್ರ್ಯತೆಯ ಮೂಲಕ ಅದು ಕಿಯಾಮತ್ ದಿನದ ತನಕ ಪವಿತ್ರವಾಗಿದೆ (ಹರಮ್ ಆಗಿದೆ). ಇಲ್ಲಿ (ಹರಮ್‌ನಲ್ಲಿ) ಯುದ್ಧ ಮಾಡುವುದು ನನಗಿಂತ ಮುಂಚೆ ಯಾರಿಗೂ ಧರ್ಮಸಮ್ಮತವಾಗಿರಲಿಲ್ಲ. ನನಗೂ ಧರ್ಮಸಮ್ಮತವಲ್ಲ; ಆದರೆ ಒಂದು ಹಗಲಿನ ಒಂದು ತಾಸು ಹೊರತು. ಆದ್ದರಿಂದ ಅಲ್ಲಾಹನ**

**ಪಾವಿತ್ರ್ಯತೆಯ ಮೂಲಕ ಅದು ಕಿಯಾಮತ್ ದಿನದ ತನಕ ಪವಿತ್ರವಾಗಿದೆ (ಹರಮ್ ಆಗಿದೆ)." [ಅಲ್‌ಬುಖಾರೀ 4/46; ಮುಸ್ಲಿಮ್ 1/986]**

ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಲಾದ ದಿನದಿಂದಲೇ ಮಕ್ಕಾ ಹರಮ್ ಆಗಿತ್ತೆಂದು ಇದರಿಂದ ಅರ್ಥ ಮಾಡಿಕೊಳ್ಳಬಹುದು. ಇನ್ನು ಅಬ್ದುಲ್ಲಾಹ್ ಇಬ್ನ್ ಝೈದ್(ﷺ)ರವರಿಂದ ವರದಿಯಾದ ಹದೀಸಿನಲ್ಲಿ ಅಲ್ಲಾಹನ ರಸೂಲ್(ﷺ)ರವರು ಹೇಳುತ್ತಾರೆ:

{إِنَّ إِبْرَاهِيمَ حَرَّمَ مَكَّةَ...} مُتَّفَقٌ عليهِ.

**"ಖಂಡಿತವಾಗಿಯೂ ಇಬ್ರಾಹೀಮ್(ﷺ)ರವರು ಮಕ್ಕಾವನ್ನು ಪವಿತ್ರಗೊಳಿಸಿದರು (ಹರಮ್ ಆಗಿ ಮಾಡಿದರು)." [ಅಲ್‌ಬುಖಾರೀ 4/346; ಮುಸ್ಲಿಮ್ 1/991]**

ಇಬ್ರಾಹೀಮ್(ﷺ)ರವರು ಮಕ್ಕಾವನ್ನು ಹರಮ್ ಆಗಿ ಮಾಡಿದರು ಎಂಬ ಪ್ರವಾದಿ(ﷺ)ರವರ ಮಾತನ್ನು, ಮಕ್ಕಾ ಹರಮ್ ಆಗಿದೆಯೆಂದು ಯಾರಿಗೂ ಗೊತ್ತಿರಲಿಲ್ಲ, ಇಬ್ರಾಹೀಮ್(ﷺ)ರವರು ಅದನ್ನು ಬಹಿರಂಗಪಡಿಸಿದರು ಮತ್ತು ತರುವಾಯ ಜಿಬ್ರೀಲ್(ﷺ)ರವರ ನಿರ್ದೇಶನದ ಪ್ರಕಾರ ಅವರು ಮಕ್ಕಾ ಹರಮ್‌ನ ಗಡಿಗಳನ್ನು ನಿಶ್ಚಯಿಸಿದರು ಎಂಬ ಅರ್ಥದಲ್ಲಿ ಕೊಂಡೊಯ್ಯಲಾಗುತ್ತದೆ. ಇದು ಇಮಾಮ್ ಅಹ್ಮದ್‌ರ ಅಭಿಪ್ರಾಯದ ಬಾಹ್ಯಾರ್ಥವಾಗಿದೆ. ಅನ್ನವವೀ ಮತ್ತು ಇಬ್ನ್ ಕಸೀರ್ ಈ ಅಭಿಪ್ರಾಯವನ್ನು ಬಲಪಡಿಸಿದ್ದಾರೆ. [ಅಲ್‌ಮಜ್ಮೂಅ್ 7/664; ತಫ್ಸೀರ್ ಇಬ್ನ್ ಕಸೀರ್ 1/174]

# ಆಧುನಿಕ ರಸ್ತೆಗಳ ಮೂಲಕ ಮಕ್ಕಾ ಹರಮ್‌ನ ಗಡಿಗಳು

ಆಧುನಿಕ ರಸ್ತೆಗಳ ಮೂಲಕ ಮಕ್ಕಾ ಹರಮ್‌ನ ಪ್ರವೇಶದ್ವಾರಗಳು ಹೀಗಿವೆ:

1. ಮಕ್ಕಾ-ಜಿದ್ದಾ ಎಕ್ಸ್‌ಪ್ರೆಸ್ ವೇ ರಸ್ತೆಯಲ್ಲಿ ( طَرِيق مَكَّة جُدَّة السَّرِيع): ಅಲ್‌ಮಸ್ಜಿದುಲ್ ಹರಾಮ್‌ನ ಪಶ್ಚಿಮ ಗೋಡೆಯಿಂದ, ಬಾಬ್ ಮಲಿಕ್ ಫಹ್ದ್‌ದಿಂದ ತೊಡಗಿ ರಸ್ತೆಯಲ್ಲಿರುವ ಎರಡು ಹೊಸ ಲಾಂಛನಗಳ ತನಕ. (21 ಕಿ.ಮೀ.)

2. ಯಮನ್‌ನಿಂದ ಹೊಸ ಅಲ್ಲೈಸ್ ರಸ್ತೆಯಲ್ಲಿ ( طَرِيق اللَّيْث الْجَدِيد): ಅಲ್‌ಮಸ್ಜಿದುಲ್ ಹರಾಮ್‌ನ ದಕ್ಷಿಣ ಗೋಡೆಯಿಂದ ರಸ್ತೆಯಲ್ಲಿರುವ ಎರಡು ಹೊಸ ಲಾಂಛನಗಳ ತನಕ. (20 ಕಿ.ಮೀ.)

3. ಅತ್ತಾಇಫ್-ಅಲ್‌ಹದಾ ಹೊಸ ರಸ್ತೆಯಲ್ಲಿ ( طَرِيق الطَّائِف الْهَدَى الْجَدِيد): ಅಲ್‌ಮಸ್ಜಿದುಲ್ ಹರಾಮ್‌ನ ದಕ್ಷಿಣ ಗೋಡೆಯಿಂದ ಅತ್ತಾಇಫ್-ಅಲ್‌ಹದಾ ಎಕ್ಸ್‌ಪ್ರೆಸ್ ರಸ್ತೆಯಲ್ಲಿರುವ ಎರಡು ಹೊಸ ಲಾಂಛನಗಳ ತನಕ. ಉಮ್ಮುಲ್ ಕುರಾ ವಿಶ್ವವಿದ್ಯಾಲಯದ ಬಳಿ. (14.2 ಕಿ.ಮೀ.)

4. ಅತ್ತಾಇಫ್-ಅಸ್ಸೈಲ್ ಎಕ್ಸ್‌ಪ್ರೆಸ್ ರಸ್ತೆಯಲ್ಲಿ ( طَرِيق الطَّائِف السَّيل السَّرِيع): ಅಲ್‌ಮಸ್ಜಿದುಲ್ ಹರಾಮ್‌ನ ಪೂರ್ವ ಗೋಡೆಯಿಂದ

ಅತ್ತಾಇಫ್ ಅಸ್ಸೈಲ್ ರಸ್ತೆಯಲ್ಲಿರುವ ಎರಡು ಹೊಸ ಲಾಂಛನಗಳ ತನಕ (13.7 ಕಿ.ಮೀ.)

[ಅಹ್ಕಾಮುಲ್ ಹರಮಿಲ್ ಮಕ್ಕೀ ಅಶ್ಶರ್‌ಇಯ್ಯಃ ಪುಟ 40. ಈ ಪುಸ್ತಕದಲ್ಲಿ ಜಿ.ಪಿ.ಎಸ್. ವ್ಯವಸ್ಥೆಯನ್ನು ಬಳಸಿ ಕಿ.ಮೀ.ಗಳನ್ನು ನಿರ್ಣಯಿಸಲಾಗಿದೆ.]

## ಮಕ್ಕಾ ಹರಮ್‌ನ ಶ್ರೇಷ್ಠತೆ

ಅಲ್ಲಾಹು ಅವನ ಹರಮನ್ನು ಇತರೆಲ್ಲ ಸ್ಥಳಗಳಿಗಿಂತಲೂ ಶ್ರೇಷ್ಠಗೊಳಿಸಿದ್ದಾನೆ. ಅದಕ್ಕೆ ಹಲವಾರು ಶ್ರೇಷ್ಠತೆಗಳನ್ನು ನಿಶ್ಚಯಿಸಿದ್ದಾನೆ. ಇಬ್ನುಲ್ ಕಯ್ಯಿಮ್ ಹೇಳುತ್ತಾರೆ:

وَمِنْ هَذَا اخْتِيَارُهُ سُبْحَانَهُ وَتَعَالَى مِنَ الْأَمَاكِنِ وَالْبِلَادِ خَيْرِهَا وَأَشْرَفِهَا وَهِيَ الْبَلَدُ الْحَرَامُ ، فَإِنَّهُ سُبْحَانَهُ وَتَعَالَى اخْتَارَهُ لِنَبِيِّهِ ﷺ وَجَعَلَهُ مَنَاسِكَ لِعِبَادِهِ وَأَوْجَبَ عَلَيْهِمُ الْإِتْيَانَ إِلَيْهِ مِنَ الْقُرْبِ وَالْبُعْدِ مِنْ كُلِّ فَجٍّ عَمِيقٍ

**“ಸ್ಥಳಗಳ ಮತ್ತು ಪಟ್ಟಣಗಳ ಪೈಕಿ ಅಲ್ಲಾಹು ಉತ್ತಮವಾದ ಮತ್ತು ಶ್ರೇಷ್ಠವಾದುದನ್ನು ಆಯ್ಕೆ ಮಾಡಿದ್ದಾನೆ. ಅದೇ ಅಲ್‌ಬಲದುಲ್ ಹರಾಮ್ (ಮಕ್ಕಾ). ಅಲ್ಲಾಹು ಅದನ್ನು ತನ್ನ ಪ್ರವಾದಿಗಾಗಿ ಆರಿಸಿದ್ದಾನೆ, ತನ್ನ ದಾಸರಿಗೆ ಅದನ್ನು ಹಜ್ಜ್ ಕರ್ಮ ನಿರ್ವಹಿಸುವ ಸ್ಥಳವನ್ನಾಗಿ ಮಾಡಿದ್ದಾನೆ**

**ಮತ್ತು ಹತ್ತಿರದಿಂದಲೂ ದೂರದಿಂದಲೂ, ಪ್ರತಿ ವಿದೂರ ದಾರಿಗಳಿಂದಲೂ ಅಲ್ಲಿಗೆ ಬರಬೇಕೆಂದು ಅವರ ಮೇಲೆ ಕಡ್ಡಾಯ ಗೊಳಿಸಿದ್ದಾನೆ."**

ಮಕ್ಕಾ ಹರಮ್‌ಗೆ ವಿಶೇಷವಾಗಿರುವ ಕೆಲವು ಪ್ರಮುಖ ಶ್ರೇಷ್ಠತೆಗಳು

1. ಅದರಲ್ಲಿ ಅಲ್ಲಾಹನ ಪವಿತ್ರ ಮನೆಯಿದೆ:

ತನ್ನ ಪವಿತ್ರ ಮನೆಯನ್ನು ಅದರಲ್ಲಿ ಮಾಡುವ ಮೂಲಕ ಅಲ್ಲಾಹು ಹರಮ್ ಪ್ರದೇಶವನ್ನು ಶ್ರೇಷ್ಠಗೊಳಿಸಿದ್ದಾನೆ. ಇಬ್ರಾಹೀಮ್(ﷺ)ರವರ ಪ್ರಾರ್ಥನೆಯನ್ನು ಉದ್ಧರಿಸಿ ಅವನು ಹೇಳಿದಂತೆ:

﴿رَّبَّنَآ إِنِّيٓ أَسۡكَنتُ مِن ذُرِّيَّتِي بِوَادٍ غَيۡرِ ذِي زَرۡعٍ عِندَ بَيۡتِكَ ٱلۡمُحَرَّمِ رَبَّنَا لِيُقِيمُواْ ٱلصَّلَوٰةَ فَٱجۡعَلۡ أَفۡـِٔدَةٗ مِّنَ ٱلنَّاسِ تَهۡوِيٓ إِلَيۡهِمۡ وَٱرۡزُقۡهُم مِّنَ ٱلثَّمَرَٰتِ لَعَلَّهُمۡ يَشۡكُرُونَ﴾ [إبراهيم: 37].

**"ಓ ನಮ್ಮ ರಬ್ಬೇ! ನಿನ್ನ ಪವಿತ್ರ ಮನೆಯ ಬಳಿ, ಯಾವುದೇ ಕೃಷಿ ಯಿಲ್ಲದ ಕಣಿವೆಯಲ್ಲಿ, ಖಂಡಿತವಾಗಿಯೂ ನಾನು ನನ್ನ ಸಂತತಿ ಗಳಲ್ಲಿ ಸೇರಿದ ಕೆಲವರನ್ನು ವಾಸವಾಗಿಸಿದ್ದೇನೆ. ಓ ನಮ್ಮ ರಬ್ಬೇ! ಅವರು ನಮಾಝನ್ನು ಸಂಸ್ಥಾಪಿಸುವುದಕ್ಕಾಗಿ. ಆದ್ದರಿಂದ ಜನರ ಹೃದಯಗಳು ಅವರ ಕಡೆಗೆ ತಿರುಗುವಂತೆ ಮಾಡು, ಅವರಿಗೆ ಫಲವರ್ಗಗಳಿಂದ ಅನ್ನಾಧಾರಗಳನ್ನು ಒದಗಿಸು. ಅವರು ಕೃತಜ್ಞತೆ ಸಲ್ಲಿಸುವವರಾಗಲೂ ಬಹುದು." [ಕುರ್‌ಆನ್ 14:37]**

ಅದು ಇಬಾದತ್ ಮಾಡುವುದಕ್ಕಾಗಿ ನಿರ್ಮಿಸಲಾದ ಮೊಟ್ಟ ಮೊದಲ ಮಸೀದಿ. ಅಲ್ಲಾಹು ಹೇಳಿದಂತೆ:

﴿إِنَّ أَوَّلَ بَيۡتٖ وُضِعَ لِلنَّاسِ لَلَّذِي بِبَكَّةَ مُبَارَكٗا وَهُدٗى لِّلۡعَٰلَمِينَ ٩٦﴾ [آل عمران: 96].

**“ಖಂಡಿತವಾಗಿಯೂ ಜನರಿಗಾಗಿ ನಿರ್ಮಿಸಲಾದ ಮೊಟ್ಟಮೊದಲ ಮನೆಯು ಬಕ್ಕಾ (ಮಕ್ಕಾ)ದಲ್ಲಿರುವುದಾಗಿದೆ. ಅದು ಅನುಗ್ರಹೀತವೂ, ಸರ್ವಲೋಕದವರಿಗೆ ಮಾರ್ಗದರ್ಶಿಯೂ ಆಗಿದೆ.” [ಕುರ್‌ಆನ್ 3:96]**

ಹಜ್ಜ್‌ಗಾಗಿ ಜನರು ಅದರ ಕಡೆಗೆ ಬರುವಂತೆ ಮಾಡಿದ್ದಾನೆ. ಅಲ್ಲಾಹು ಹೇಳಿದಂತೆ:

﴿وَلِلَّهِ عَلَى ٱلنَّاسِ حِجُّ ٱلۡبَيۡتِ مَنِ ٱسۡتَطَاعَ إِلَيۡهِ سَبِيلٗاۚ﴾ [آل عمران: 97].

**“ಅದನ್ನು ತಲುಪಲು ಸಾಧ್ಯವಿರುವ ಜನರು ಅದರೆಡೆಗೆ ಹಜ್ಜ್ ಮಾಡುವುದು ಅವರಿಗೆ ಅಲ್ಲಾಹನೊಂದಿಗಿರುವ ಬಾಧ್ಯತೆಯಾಗಿದೆ.” [ಕುರ್‌ಆನ್ 3:97]**

ಹಜ್ಜ್ ನಿರ್ವಹಿಸುವುದನ್ನು ಹಿಂದಿನ ಎಲ್ಲ ಪಾಪ ಮತ್ತು ದೋಷಗಳನ್ನು ಅಳಿಸಿಹಾಕುವಂತದ್ದಾಗಿ ಮಾಡಿದ್ದಾನೆ. ಅಲ್‌ಬುಖಾರೀ ಮತ್ತು ಮುಸ್ಲಿಮ್‌ನಲ್ಲಿರುವ ಅಬೂ ಹುರೈರಾ(ﷺ)ರವರ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

{مَنْ حَجَّ فَلَمْ يَرْفُثْ وَلَمْ يَفْسُقْ رَجَعَ كَيَوْمِ وَلَدَتْهُ أُمُّهُ}. مُتَّفَقٌ عليهِ.

**“ಯಾರಾದರೂ ಅಶ್ಲೀಲ ಕೃತ್ಯಗಳನ್ನು ಮಾಡದೆ, ಆಜ್ಞೋಲ್ಲಂಘನೆಗಳನ್ನು ಮಾಡದೆ, ಹಜ್ಜ್ ನಿರ್ವಹಿಸುವುದಾದರೆ ಅವನ**

**ತಾಯಿ ಅವನನ್ನು ಹೆತ್ತ ದಿನದಂತೆ ಮರಳುವನು." [ಅಲ್‌ಬುಖಾರೀ 3/283; ಮುಸ್ಲಿಮ್ 1/984]**

ಅಸ್‌ಹಾಬುಲ್ ಫೀಲ್ (ಆನೆಯ ಜನರು) ಘಟನೆಯಲ್ಲಿರುವಂತೆ ಅಲ್ಲಾಹು ಅವನ ಮನೆಯನ್ನು ಶತ್ರುಗಳಿಂದ ಸಂರಕ್ಷಿಸಿದ್ದಾನೆ ಮತ್ತು ಅದರಲ್ಲಿ ನಿರ್ವಹಿಸುವ ನಮಾಝ್‌ಗೆ ದುಪ್ಪಟ್ಟು ಪ್ರತಿಫಲಗಳನ್ನು ನಿಶ್ಚಯಿಸಿದ್ದಾನೆ.

2. ಅಲ್ಲಾಹು ಹರಮನ್ನು ಸುರಕ್ಷಿತ ಸ್ಥಳವನ್ನಾಗಿ ಮಾಡಿದ್ದಾನೆ:

ಅಲ್ಲಾಹು ಹರಮನ್ನು ಸುರಕ್ಷಿತ ಸ್ಥಳವನ್ನಾಗಿ ಮಾಡುವ ಮೂಲಕ ಅದನ್ನು ವಿಶೇಷಗೊಳಿಸಿದ್ದಾನೆ. ಇದು ಇಬ್ರಾಹೀಮ್(عليه السلام)ರವರ ಪ್ರಾರ್ಥನೆಯ ಫಲವಾಗಿತ್ತು. ಅವರು ಅಲ್ಲಾಹನಲ್ಲಿ ಪ್ರಾರ್ಥಿಸಿದರು:

﴿وَإِذۡ قَالَ إِبۡرَٰهِـۧمُ رَبِّ ٱجۡعَلۡ هَٰذَا بَلَدًا ءَامِنٗا وَٱرۡزُقۡ أَهۡلَهُۥ مِنَ ٱلثَّمَرَٰتِ﴾ [البقرة: 126].

**"ಇಬ್ರಾಹೀಮ್ ಹೇಳಿದ ಸಂದರ್ಭವನ್ನು ಸ್ಮರಿಸಿರಿ: ಓ ನನ್ನ ರಬ್ಬೇ! ಈ ನಾಡನ್ನು ಒಂದು ಸುರಕ್ಷಿತ ನಾಡನ್ನಾಗಿ ಮಾಡು ಮತ್ತು ಇದರ ನಿವಾಸಿಗಳಿಗೆ ಫಲವರ್ಗಗಳಿಂದ ಅನ್ನಾಧಾರವನ್ನು ಒದಗಿಸು." [ಕುರ್‌ಆನ್ 2:126]**

ಅಲ್ಲಾಹು ಕುರೈಶಿಗಳಿಗೆ ಅವರ ನಾಡಿನಲ್ಲಿ ಮತ್ತು ಅವರ ಯಾತ್ರೆಗಳಲ್ಲಿ ಸುರಕ್ಷೆಯನ್ನು ನೀಡುವ ಮೂಲಕ ಅವರನ್ನು ಅನುಗ್ರಹಿಸಿದ್ದಾನೆ. ಅಲ್ಲಾಹು ಹೇಳುತ್ತಾನೆ:

﴿ٱلَّذِيٓ أَطۡعَمَهُم مِّن جُوعٖ وَءَامَنَهُم مِّنۡ خَوۡفِۭ ٤﴾ [قريش: 4].

**“ಅಂದರೆ ಅವರಿಗೆ ಹಸಿವಿನಿಂದ ಅನ್ನವನ್ನು ನೀಡಿದವನು ಮತ್ತು ಭಯದಿಂದ ಸುರಕ್ಷೆಯನ್ನು ದಯಪಾಲಿಸಿದವನು.” [ಕುರ್‌ಆನ್ 106:4]**

ಜಾಹಿಲೀ ಕಾಲದಲ್ಲಿ ಒಂದು ವಾಡಿಕೆ ಮತ್ತು ನಂಬಿಕೆಯಾಗಿ, ಮತ್ತು ಇಸ್ಲಾಮಿನಲ್ಲಿ ಶರೀಅತ್ತಿನ ಒಂದು ನಿಯಮವಾಗಿ ಈ ಸುರಕ್ಷೆಯು ಜಾರಿಯಲ್ಲಿದೆ. ಅಲ್ಲಾಹು ಹೇಳುತ್ತಾನೆ:

﴿وَمَن دَخَلَهُۥ كَانَ ءَامِنًاۗ﴾ [آل عمران: 97] .

**“ಯಾರು ಅದನ್ನು (ಹರಮನ್ನು) ಪ್ರವೇಶಿಸುತ್ತಾನೋ ಅವನು ಸುರಕ್ಷಿತನು.” [ಕುರ್‌ಆನ್ 3:97]**

3. ಅಲ್ಲಿ ದುಪ್ಪಟ್ಟು ಅನ್ನಾಧಾರಗಳಿವೆ:

ಅಲ್ಲಾಹು ಇಬ್ರಾಹೀಮ್‌ರ ಪ್ರಾರ್ಥನೆಗೆ ಉತ್ತರ ನೀಡಿದ್ದನು. ಅಲ್ಲಾಹು ಹೇಳಿದಂತೆ:

﴿رَّبَّنَآ إِنِّيٓ أَسۡكَنتُ مِن ذُرِّيَّتِي بِوَادٍ غَيۡرِ ذِي زَرۡعٍ عِندَ بَيۡتِكَ ٱلۡمُحَرَّمِ رَبَّنَا لِيُقِيمُواْ ٱلصَّلَوٰةَ فَٱجۡعَلۡ أَفۡـِٔدَةٗ مِّنَ ٱلنَّاسِ تَهۡوِيٓ إِلَيۡهِمۡ وَٱرۡزُقۡهُم مِّنَ ٱلثَّمَرَٰتِ لَعَلَّهُمۡ يَشۡكُرُونَ﴾ [إبراهيم: 37] .

**“ಓ ನಮ್ಮ ರಬ್ಬೇ! ನಿನ್ನ ಪವಿತ್ರ ಮನೆಯ ಬಳಿ, ಯಾವುದೇ ಕೃಷಿ ಯಿಲ್ಲದ ಕಣಿವೆಯಲ್ಲಿ, ಖಂಡಿತವಾಗಿಯೂ ನಾನು ನನ್ನ ಸಂತತಿ ಗಳಲ್ಲಿ ಸೇರಿದ ಕೆಲವರನ್ನು ವಾಸವಾಗಿಸಿದ್ದೇನೆ. ಓ ನಮ್ಮ ರಬ್ಬೇ! ಅವರು ನಮಾಝನ್ನು ಸಂಸ್ಥಾಪಿಸುವುದಕ್ಕಾಗಿ. ಆದ್ದರಿಂದ ಜನರ ಹೃದಯಗಳು ಅವರ ಕಡೆಗೆ ತಿರುಗುವಂತೆ ಮಾಡು, ಅವರಿಗೆ ಫಲವರ್ಗಗಳಿಂದ**

**ಅನ್ನಾಧಾರಗಳನ್ನು ಒದಗಿಸು. ಅವರು ಕೃತಜ್ಞತೆ ಸಲ್ಲಿಸುವವರಾಗಲೂ ಬಹುದು." [ಕುರ್‌ಆನ್ 14:37]**

ಹೀಗೆ ಹೇಳಲಾಗುತ್ತದೆ: ಇಬ್ರಾಹೀಮ್(ﷺ)ರವರು ಪ್ರಾರ್ಥಿಸಿದಾಗ ಅಲ್ಲಾಹು ಅವರ ಪ್ರಾರ್ಥನೆಗೆ ಉತ್ತರವಾಗಿ ತಾಇಫನ್ನು ಶಾಮ್‌ನಿಂದ ಮಕ್ಕಾಗೆ ವರ್ಗಾಯಿಸಿದನು. ಆದರೆ ಇದು ಸಹೀಹ್ ಅಲ್ಲ. ಅನಸ್(ؓ)ರವರ ಹದೀಸಿನಲ್ಲಿ ದೃಢಪಟ್ಟಿರುವಂತೆ ಪ್ರವಾದಿ(ﷺ)ರವರು ಹೇಳಿದರು:

{اللَّهُمَّ اجْعَلْ بِالْمَدِينَةِ ضِعْفَيْ مَا بِمَكَّةَ مِنْ بَرَكَةٍ}. متفق عليه.

**"ಓ ಅಲ್ಲಾಹ್! ಮಕ್ಕಾದಲ್ಲಿರುವ ಬರಕತ್ತಿನ ದುಪ್ಪಟ್ಟನ್ನು ನೀನು ಮದೀನಾದಲ್ಲಿ ಮಾಡು." [ಅಲ್‌ಬುಖಾರೀ 4/97; ಮುಸ್ಲಿಮ್ 1/994]**

ಪ್ರಪಂಚದ ನಾನಾ ಕಡೆಗಳಿಂದ ಆಹಾರ ವಸ್ತುಗಳು ಮತ್ತು ಒಳ್ಳೆಯ ವಸ್ತುಗಳು ಮಕ್ಕಾಗೆ ಹರಿದು ಬರುವುದನ್ನು ಆ ಅನುಗ್ರಹೀತ ಪ್ರದೇಶದಲ್ಲಿ ವಾಸಿಸುವವರಿಗೆ ಕಾಣಬಹುದು. ಇಬ್ನು ಸ್ಸಅ್‌ದೀ ಹೇಳುತ್ತಾರೆ:

فَإِنَّكَ تَرَى مَكَّةَ الْمُشْرِفَةَ كُلَّ وَقْتٍ ، وَالثِّمَارُ فِيهَا مُتَوَافِرَةٌ ، وَالْأَرْزَاقُ تَتَوَالَى إِلَيْهَا مِنْ كُلِّ جَانِبٍ.

**"ಅನುಗ್ರಹೀತ ಮಕ್ಕಾದಲ್ಲಿ ಎಲ್ಲ ಸಮಯಗಳಲ್ಲೂ, ಫಲವರ್ಗಗಳು ಅಲ್ಲಿ ಲಭ್ಯವಾಗಿರುವುದನ್ನು ಮತ್ತು ಆಹಾರ ವಸ್ತುಗಳು ಎಲ್ಲ ಕಡೆಗಳಿಂದಲೂ ಅಲ್ಲಿಗೆ ಬರುತ್ತಲೇ ಇರುವುದನ್ನು ನೀನು ಕಾಣುವೆ." [ತಯ್ಸೀರುಲ್ ಕರೀಮಿ ರ್ರಹ್ಮಾನ್ ಪುಟ 427]**

4. ಮಕ್ಕಾದಲ್ಲಿ ದಜ್ಜಾಲ್ ಕಾಲಿಡಲಾರನು:

ಅಲ್ಲಾಹು ಮಕ್ಕಾ ಮತ್ತು ಮದೀನಕ್ಕೆ, ಅಲ್ಲಿಗೆ ದಜ್ಜಾಲ್ ಪ್ರವೇಶಿಸದಂತೆ ಮಾಡುವ ಮೂಲಕ ವಿಶೇಷಗೊಳಿಸಿದ್ದಾನೆ. ಅಲ್‌ಬುಖಾರೀ ಮತ್ತು ಮುಸ್ಲಿಮ್ ವರದಿ ಮಾಡಿದ ಅನಸ್ ಇಬ್ನ್ ಮಾಲಿಕ್(ﷺ)ರವರ ಹದೀಸಿನಲ್ಲಿರುವಂತೆ ಪ್ರವಾದಿ(ﷺ)ರವರು ಹೇಳಿದರು:

{لَيْسَ مِنَ الْبَلَدِ إِلَّا سَيَطَؤُهُ الدَّجَّالُ إِلَّا مَكَّةَ وَالْمَدِينَةَ}. متفق عليه.

**“ದಜ್ಜಾಲ್ ಕಾಲಿಡದ ಯಾವುದೇ ನಾಡೂ ಇಲ್ಲ; ಮಕ್ಕಾ ಮತ್ತು ಮದೀನಾದ ಹೊರತು.” [ಅಲ್‌ಬುಖಾರೀ 4/95; ಮುಸ್ಲಿಮ್ 3/2265]**

## ಭೂಮಿಯ ಮೇಲೆ ಎಷ್ಟು ಹರಮ್‌ಗಳಿವೆ?

ಮಕ್ಕಾ ಮತ್ತು ಮದೀನಾ ಎರಡು ಹರಮ್‌ಗಳಾಗಿವೆ ಎಂಬ ವಿಷಯವು ಸಹೀಹಾದ ಮತ್ತು ಖಚಿತವಾದ ಪಠ್ಯಗಳ ಮೂಲಕ ದೃಢಪಟ್ಟಿದೆ. ಇದು ಬಹುಸಂಖ್ಯಾತ ಉಲಮಾಗಳ ಅಭಿಪ್ರಾಯವೂ ಆಗಿದೆ. ಈ ವಿಷಯದಲ್ಲಿ ಯಾರೂ ವಿರುದ್ಧಾಭಿಪ್ರಾಯವನ್ನು ಹೊಂದಿಲ್ಲ; ಆದರೆ ಇಮಾಮ್ ಅಬೂ ಹನೀಫಾರವರ ಹೊರತು. ಅವರ ಅಭಿಪ್ರಾಯ ಪ್ರಕಾರ ಮದೀನಾ ಹರಮ್ ಅಲ್ಲ.

‘ವಜ್ಜ್’ (ತಾಇಫ್‌ನ ಬಳಿಯಿರುವ ಕಣಿವೆ) ಕೂಡ ಹರಮ್ ಆಗಿದೆಯೆಂದು ಇಮಾಮ್ ಅಶ್ಶಾಫಿಈ ಅಭಿಪ್ರಾಯಪಟ್ಟಿದ್ದಾರೆ. ಅವರು ಅದಕ್ಕೆ ಪುರಾವೆಯಾಗಿ ಅಝ್ಝುಬೈರ್ ಇಬ್ನುಲ್ ಅವ್ವಾಮ್(ﷺ)ರ

ಹದೀಸನ್ನು ಮಂಡಿಸುತ್ತಾರೆ. ಆ ಹದೀಸಿನಲ್ಲಿರುವ ಪ್ರಕಾರ ಅಲ್ಲಾಹನ ರಸೂಲ್(ﷺ)ರವರು ಹೇಳಿದರು:

{إِنَّ صَيْدَ وَجٍّ وَعِضَاهَهُ حَرَامٌ مُحَرَّمٌ لِلَّهِ}. رواه أبوداود والبيهقي.

**"ವಜ್ಜ್‌ನಲ್ಲಿ ಬೇಟೆಯಾಡುವುದು ಮತ್ತು ಅದರಲ್ಲಿರುವ ಮುಳ್ಳು ವೃಕ್ಷಗಳು ನಿಷಿದ್ಧವೂ, ಅಲ್ಲಾಹನಿಗಾಗಿ ನಿಷಿದ್ಧಗೊಳಿಸಲ್ಪಟ್ಟದ್ದೂ ಆಗಿದೆ." [ಅಬೂ ದಾವೂದ್ 2/528; ಅಲ್‌ಬೈಹಕೀ 5/200]**

ಈ ಹದೀಸಿನ ವರದಿಗಾರರಲ್ಲೊಬ್ಬರಾದ ಮುಹಮ್ಮದ್ ಇಬ್ನ್ ಅಬ್ದುಲ್ಲಾಹ್ ಅತ್ತಾಇಫೀ ಎಂಬ ವ್ಯಕ್ತಿ ದುರ್ಬಲರಾಗಿರುವ ಕಾರಣ ಒಂದು ಗುಂಪು ವಿದ್ವಾಂಸರು ಈ ಹದೀಸನ್ನು ದಈಫ್ ಎಂದಿದ್ದಾರೆ. ಸರಿಯಾದ ಅಭಿಪ್ರಾಯ ಪ್ರಕಾರ 'ವಜ್ಜ್' ಹರಮ್ ಅಲ್ಲ. ಇದು ಬಹುಸಂಖ್ಯಾತ ಉಲಮಾಗಳ ಅಭಿಪ್ರಾಯ.

## ಹರಮ್‌ನಲ್ಲಿ ನಿರ್ವಹಿಸುವ ನಮಾಝ್‌ಗೆ ದುಪ್ಪಟ್ಟು ಪ್ರತಿಫಲವಿದೆ

ಜಾಬಿರ್ ಇಬ್ನ್ ಅಬ್ದಿಲ್ಲಾಹ್(رضي الله عنه) ವರದಿ ಮಾಡಿದ ಹದೀಸಿನಲ್ಲಿ ದೃಢಪಟ್ಟಿರುವ ಪ್ರಕಾರ ಪ್ರವಾದಿ(ﷺ)ರವರು ಹೇಳಿದರು:

{صَلَاةٌ فِي مَسْجِدِي أَفْضَلُ مِنْ أَلْفِ صَلَاةٍ فِيمَا سِوَاهُ إِلَّا الْمَسْجِدَ الْحَرَامَ ، وَصَلَاةٌ فِي الْمَسْجِدِ الْحَرَامِ أَفْضَلُ مِنْ مِئَةِ أَلْفِ صَلَاةٍ فِيمَا سِوَاهُ} رواه أحمد .

**"ನನ್ನ ಮಸೀದಿಯಲ್ಲಿ (ಅಲ್‌ಮಸ್ಜಿದುನ್ನಬವೀಯಲ್ಲಿ) ನಿರ್ವಹಿಸುವ ಒಂದು ನಮಾಝ್ ಇತರ ಮಸೀದಿಗಳಲ್ಲಿ ನಿರ್ವಹಿಸುವ ಒಂದು ಸಾವಿರ ನಮಾಝ್‌ಗಿಂತಲೂ ಶ್ರೇಷ್ಠವಾಗಿದೆ. ಆದರೆ ಅಲ್‌ಮಸ್ಜಿದುಲ್ ಹರಾಮ್‌ನಲ್ಲಿ ನಿರ್ವಹಿಸುವ ನಮಾಝ್‌ನ ಹೊರತು. ಅಲ್‌ಮಸ್ಜಿದುಲ್ ಹರಾಮ್‌ನಲ್ಲಿ ನಿರ್ವಹಿಸುವ ಒಂದು ನಮಾಝ್ ಇತರ ಮಸೀದಿಯಲ್ಲಿ ನಿರ್ವಹಿಸುವ ನೂರು ಸಾವಿರ (ಒಂದು ಲಕ್ಷ) ನಮಾಝ್‌ಗಳಿಗಿಂತಲೂ ಶ್ರೇಷ್ಠವಾಗಿದೆ." [ಅಹ್ಮದ್ 3/343, 397]. ಈ ಹದೀಸಿನ ಸನದ್‌ನಲ್ಲಿ ವಿಮರ್ಶೆಯಿದೆ.**

ಅದೇ ರೀತಿ ಅಬ್ದುಲ್ಲಾಹ್ ಇಬ್ನು ಝ್ಝುಬೈರ್(ﷺ)ರಿಂದ ವರದಿಯಾದ ಹದೀಸಿನಲ್ಲಿರುವ ಪ್ರಕಾರ ಪ್ರವಾದಿ(ﷺ)ರವರು ಹೇಳಿದರು:

{صَلَاةٌ فِي مَسْجِدِي هَذَا أَفْضَلُ مِنْ أَلْفِ صَلَاةٍ فِيمَا سِوَاهُ مِنَ الْمَسَاجِدِ إِلَّا الْمَسْجِدَ الْحَرَامَ ، وَصَلَاةٌ فِي الْمَسْجِدِ الْحَرَامِ أَفْضَلُ مِنْ مِئَةِ صَلَاةٍ فِي هَذَا} رواه أحمد والبيهقي.

**"ನನ್ನ ಈ ಮಸೀದಿಯಲ್ಲಿ (ಅಲ್‌ಮಸ್ಜಿದುನ್ನಬವೀಯಲ್ಲಿ) ನಿರ್ವಹಿಸುವ ಒಂದು ನಮಾಝ್ ಇತರ ಮಸೀದಿಗಳಲ್ಲಿ ನಿರ್ವಹಿಸುವ ಒಂದು ಸಾವಿರ ನಮಾಝ್‌ಗಿಂತಲೂ ಶ್ರೇಷ್ಠವಾಗಿದೆ. ಆದರೆ ಅಲ್‌ಮಸ್ಜಿದುಲ್ ಹರಾಮ್‌ನಲ್ಲಿ ನಿರ್ವಹಿಸುವ ನಮಾಝ್‌ನ ಹೊರತು. ಅಲ್‌ಮಸ್ಜಿದುಲ್ ಹರಾಮ್‌ನಲ್ಲಿ ನಿರ್ವಹಿಸುವ ಒಂದು ನಮಾಝ್ ಈ ಮಸೀದಿಯಲ್ಲಿ**

**(ಅಲ್‌ಮಸ್ಜಿದುನ್ನಬವೀಯಲ್ಲಿ) ನಿರ್ವಹಿಸುವ ನೂರು ನಮಾಝ್‌ಗಳಿಗಿಂತಲೂ ಶ್ರೇಷ್ಠವಾಗಿದೆ.”** [**ಅಹ್ಮದ್ 4/5; ಅಲ್‌ಬೈಹಕೀ 5246**].

ಈ ಹದೀಸ್ ಅಬ್ದುಲ್ಲಾಹ್ ಇಬ್ನು ಝ್ಝುಬೈರ್(ﷺ)ರಿಂದ ಮೌಕೂಫ್ ಆಗಿಯೂ (ಅಂದರೆ ಅವರ ಮಾತಾಗಿ) ವರದಿಯಾಗಿದೆ. ಮೌಕೂಫ್ ಆಗಿರುವ ಈ ವರದಿಯು ಮರ್ಫೂಅ್ ಆಗಿರುವ (ಪ್ರವಾದಿ(ﷺ)ರವರ ಮಾತಾಗಿ ವರದಿಯಾಗಿರುವ) ವರದಿಗಿಂತಲೂ ಸಹೀಹ್ ಆಗಿದೆ. ಅದೇ ರೀತಿ ಉಮರ್(ﷺ)ರಿಂದಲೂ ಈ ಹದೀಸ್ ಮೌಕೂಫ್ ಆಗಿ ವರದಿಯಾಗಿದೆ. [ಇಬ್ನ್ ಅಬೀ ಶೈಬಾ 2/371]. ಈ ಎಲ್ಲ ಹಾದಿಗಳನ್ನು ಒಟ್ಟುಗೂಡಿಸುವಾಗ ಈ ಹದೀಸ್ ಹಸನ್‌ನ ಶ್ರೇಣಿಗೆ ಏರುತ್ತದೆ. ಮಾತ್ರವಲ್ಲ ಇತರ ಸಹಾಬಾಗಳಿಂದ ವರದಿಯಾದ ಅನೇಕ ದೃಢಪಟ್ಟ ಅಸರ್‌ಗಳು ಕೂಡ ಇದನ್ನು ಬೆಂಬಲಿಸುತ್ತದೆ.

ನಮಾಝ್‌ಗಿರುವ ಈ ದುಪ್ಪಟ್ಟು ಪ್ರತಿಫಲಗಳು ಕಡ್ಡಾಯ ನಮಾಝ್‌ಗೆ ಮಾತ್ರ ಸೀಮಿತವೇ? ಅಥವಾ ಐಚ್ಛಿಕ ನಮಾಝ್‌ಗೂ ಇದೆಯೇ? ಇದರ ಬಗ್ಗೆ ಉಲಮಾಗಳಿಗೆ ಎರಡು ಅಭಿಪ್ರಾಯಗಳಿವೆ.

**ಅಭಿಪ್ರಾಯ 1:**

ಈ ದುಪ್ಪಟ್ಟು ಪ್ರತಿಫಲಗಳು ಕಡ್ಡಾಯ ನಮಾಝ್‌ಗೂ ಐಚ್ಛಿಕ ನಮಾಝ್‌ಗೂ ಇದೆ. ಇದು ಶಾಫಿಈಗಳ ಮತ್ತು ಹಂಬಲೀಗಳ ಅಭಿಪ್ರಾಯ. [ನೋಡಿ: ಮತಾಲಿಬು ಉಲಿ ನ್ನಹ್ಯ್ 2/383; ಅಲ್‌ಫುರೂಅ್ 1/599]

**ಅಭಿಪ್ರಾಯ 2:**

ಈ ದುಪ್ಪಟ್ಟು ಪ್ರತಿಫಲಗಳು ಕಡ್ಡಾಯ ನಮಾಝ್‌ಗೆ ಮಾತ್ರ ಸೀಮಿತ. ಇದು ಅಬೂ ಹನೀಫಾ ಮತ್ತು ಮಾಲಿಕೀಗಳ ಅಭಿಪ್ರಾಯ. [ನೋಡಿ: ಮುಶ್ಕಿಲುಲ್ ಆಸಾರ್ 1/251; ಫತ್‌ಹುಲ್ ಬಾರೀ 3/67]

ಮೊದಲ ಅಭಿಪ್ರಾಯದವರು ತಮ್ಮ ಅಭಿಪ್ರಾಯಕ್ಕೆ ಮೇಲೆ ಉಲ್ಲೇಖಿಸಲಾದ ಹದೀಸ್‌ಗಳಲ್ಲಿರುವ ಅನಿರ್ಬಂಧಿತ ವಿಧಿಯನ್ನು ಪುರಾವೆಯಾಗಿ ಮಂಡಿಸುತ್ತಾರೆ.

ಎರಡನೆ ಅಭಿಪ್ರಾಯದವರು ತಮ್ಮ ಅಭಿಪ್ರಾಯಕ್ಕೆ ಝೈದ್ ಇಬ್ನ್ ಸಾಬಿತ್(ﷺ)ರವರ ಹದೀಸನ್ನು ಪುರಾವೆಯಾಗಿ ಮಂಡಿಸುತ್ತಾರೆ. ಆ ಹದೀಸಿನಲ್ಲಿರುವ ಪ್ರಕಾರ ಪ್ರವಾದಿ(ﷺ)ರವರು ಹೇಳುತ್ತಾರೆ:

{فَإِنَّ خَيْرَ صَلَاةِ الْمَرْءِ فِي بَيْتِهِ إِلَّا الصَّلَاةَ الْمَكْتُوبَةَ} رواه البخاري.

**“ಕಡ್ಡಾಯ ನಮಾಝ್‌ಗಳನ್ನು ಹೊರತುಪಡಿಸಿದರೆ, ಒಬ್ಬ ವ್ಯಕ್ತಿಯ ಅತ್ಯುತ್ತಮ ನಮಾಝ್ ಅವನು ಅವನ ಮನೆಯಲ್ಲಿ ನಿರ್ವಹಿಸುವ ನಮಾಝ್.” [ಅಲ್‌ಬುಖಾರೀ 2/214]**

ಅವರು ಹೇಳುತ್ತಾರೆ: “ಒಂದು ವೇಳೆ ಪ್ರವಾದಿ(ﷺ)ರವರ ಮಸೀದಿಯಲ್ಲಿ (ಅಲ್‌ಮಸ್ಜಿದುನ್ನಬವೀಯಲ್ಲಿ) ನಿರ್ವಹಿಸುವ ಐಚ್ಛಿಕ ನಮಾಝ್‌ಗೆ ದುಪ್ಪಟ್ಟು ಪ್ರತಿಫಲಗಳಿರುತ್ತಿದ್ದರೆ, ಐಚ್ಛಿಕ ನಮಾಝನ್ನು ಮನೆಯಲ್ಲಿ ನಿರ್ವಹಿಸಬೇಕೆಂದು ಪ್ರವಾದಿ(ﷺ)ರವರು ಹೇಳುತ್ತಿರಲಿಲ್ಲ.”

ಇದಕ್ಕೆ ಮೊದಲನೆ ಅಭಿಪ್ರಾಯದವರು ಹೀಗೆ ಉತ್ತರ ನೀಡುತ್ತಾರೆ:

1. ಹದೀಸ್‌ಗಳಲ್ಲಿರುವ ಅನಿರ್ಬಂಧಿತ ವಿಧಿಯನ್ನು ಹಾಗೆಯೇ ಉಳಿಸಿಕೊಳ್ಳುವುದರಲ್ಲಿ ಯಾವುದೇ ಅಡ್ಡಿಯಿಲ್ಲ. ಆಗ ಆ ಹದೀಸ್‌ಗಳ

ಪ್ರಕಾರ ಮಕ್ಕಾ ಅಥವಾ ಮದೀನಾ ಹರಮ್‌ಗಳಲ್ಲಿರುವ ಮನೆಗಳಲ್ಲಿ ನಿರ್ವಹಿಸುವ ಐಚ್ಛಿಕ ನಮಾಝ್‌ಗೆ, ಅವುಗಳಲ್ಲದ ಇತರ ಸ್ಥಳಗಳಲ್ಲಿರುವ ಮನೆಗಳಲ್ಲಿ ನಿರ್ವಹಿಸಿವ ಐಚ್ಛಿಕ ನಮಾಝ್‌ಗಿಂತಲೂ ದುಪ್ಪಟ್ಟು ಪ್ರತಿಫಲಗಳಿವೆ ಎಂದಾಗುತ್ತದೆ.

2. ಮನೆಗಳಲ್ಲಿ ನಿರ್ವಹಿಸುವ ಐಚ್ಛಿಕ ನಮಾಝ್ ಶ್ರೇಷ್ಠವಾಗಿದೆಯೇ ಹೊರತು ಅದಕ್ಕೆ ದುಪ್ಪಟ್ಟು ಪ್ರತಿಫಲಗಳಿಲ್ಲ. ಯಾಕೆಂದರೆ ಆ ವಿಷಯದಲ್ಲಿ ಯಾವುದೇ ಪಠ್ಯವು ಬಂದಿಲ್ಲ.

ಒಟ್ಟಿನಲ್ಲಿ, ಅಲ್‌ಮಸ್ಜಿದುಲ್ ಹರಾಮ್‌ನಲ್ಲಿ ನಿರ್ವಹಿಸುವ ಕಡ್ಡಾಯ ಮತ್ತು ಐಚ್ಛಿಕ ನಮಾಝ್‌ಗಳಿಗೆ ದುಪ್ಪಟ್ಟು ಪ್ರತಿಫಲಗಳಿವೆ. ಸಹೀಹಾದ ಹದೀಸ್‌ಗಳು ಇದನ್ನೇ ಸೂಚಿಸುತ್ತವೆ. ಅದೇ ರೀತಿ ಐಚ್ಛಿಕ ನಮಾಝನ್ನು ಮನೆಯಲ್ಲಿ ನಿರ್ವಹಿಸುವುದು ಅದನ್ನು ಮಸೀದಿಯಲ್ಲಿ ನಿರ್ವಹಿಸುವುದಕ್ಕಿಂತಲೂ ಶ್ರೇಷ್ಠವಾಗಿದೆ. ಆ ಮಸೀದಿಯು ಮೂರು ಶ್ರೇಷ್ಠ ಮಸೀದಿಗಳಾಗಿದ್ದರೂ ಸರಿ. [ನೋಡಿ: ನೈಲುಲ್ ಅವ್ತಾರ್ 3/73]

# ಮಕ್ಕಾ ಹರಮ್‌ನಲ್ಲಿ ನಿರ್ವಹಿಸುವ ನಮಾಝ್‌ಗಿರುವ ದುಪ್ಪಟ್ಟು ಪ್ರತಿಫಲ

ನಮಾಝ್‌ಗೆ ದುಪ್ಪಟ್ಟು ಪ್ರತಿಫಲವಿದೆಯೆಂದು ಹೇಳಲಾಗಿರುವ 'ಅಲ್‌ಮಸ್ಜಿದುಲ್ ಹರಾಮ್' ಎಂದರೆ ಯಾವುದೆಂಬ ಬಗ್ಗೆ ಉಲಮಾಗಳಿಗೆ ಹಲವು ಅಭಿಪ್ರಾಯಗಳಿವೆ.

**ಅಭಿಪ್ರಾಯ 1:**

ಅಲ್‌ಮಸ್ಜಿದುಲ್ ಹರಾಮ್ ಎಂದರೆ ಕಅ್‌ಬಾ: ಈ ಅಭಿಪ್ರಾಯದವರು ಇದಕ್ಕೆ ನೀಡುವ ಮೊದಲನೆ ಪುರಾವೆ ಅಲ್ಲಾಹನ ಈ ವಚನ:

﴿فَوَلِّ وَجۡهَكَ شَطۡرَ ٱلۡمَسۡجِدِ ٱلۡحَرَامِۚ﴾ [البقرة: 144].

**"ಆದ್ದರಿಂದ ತಾವು ತಮ್ಮ ಮುಖವನ್ನು ಅಲ್‌ಮಸ್ಜಿದುಲ್ ಹರಾಮ್‌ನ ಕಡೆಗೆ ತಿರುಗಿಸಿರಿ." [ಕುರ್‌ಆನ್ 2:144]**

ಅವರು ಹೇಳುತ್ತಾರೆ: "ಈ ಆಯತ್ತಿನಲ್ಲಿ 'ಅಲ್‌ಮಸ್ಜಿದುಲ್ ಹರಾಮ್' ಎಂದು ಹೇಳಲಾಗಿರುವುದರ ಉದ್ದೇಶವು ಕಅ್‌ಬಾ ಮಾತ್ರವಾಗಿದೆ. ಅದರ ಸುತ್ತಲಿರುವ ಮಸೀದಿಯಾಗಲಿ, ಮಕ್ಕಾ ಹರಮ್ ಆಗಲಿ ಅಲ್ಲ.

ಇದಕ್ಕೆ ಹೀಗೆ ಉತ್ತರಿಸಲಾಗುತ್ತದೆ: "ಇಲ್ಲಿ 'ಅಲ್‌ಮಸ್ಜಿದುಲ್ ಹರಾಮ್' ಎಂಬ ಪದವನ್ನು ಅನಿರ್ಬಂಧಿತ ಅರ್ಥದಲ್ಲಿ ಪ್ರಯೋಗಿಸಲಾಗಿದೆ. ಕಅ್‌ಬಾ ಮತ್ತು ಅದರ ಸುತ್ತಲಿರುವ ಮಸೀದಿಯೂ ಇದರಲ್ಲಿ ಒಳಪಡುತ್ತದೆ.

**ಪುರಾವೆ 2:**

ಪ್ರವಾದಿ(ﷺ)ರವರ ಹದೀಸ್:

{صَلَاةٌ فِي مَسْجِدِي هَذَا أَفْضَلُ مِنْ أَلْفِ صَلَاةٍ فِيمَا سِوَاهُ مِنَ الْمَسَاجِدِ إِلَّا الْكَعْبَةَ} رواه أحمد وابن أبي شيبة.

**"ನನ್ನ ಮಸೀದಿಯಲ್ಲಿ (ಅಲ್‌ಮಸ್ಜಿದುನ್ನಬವೀಯಲ್ಲಿ) ನಿರ್ವಹಿಸುವ ಒಂದು ನಮಾಝ್ ಇತರ ಮಸೀದಿಗಳಲ್ಲಿ ನಿರ್ವಹಿಸುವ ಒಂದು ಸಾವಿರ ನಮಾಝ್‌ಗಿಂತಲೂ ಶ್ರೇಷ್ಠವಾಗಿದೆ. ಆದರೆ ಕಅ್‌ಬಾದಲ್ಲಿ ನಿರ್ವಹಿಸುವ ನಮಾಝ್‌ನ ಹೊರತು." [ಅಹ್ಮದ್ 2/683; ಇಬ್ನ್ ಅಬೀ ಶೈಬಾ 2/173]**

ಇದಕ್ಕೆ ಹೀಗೆ ಉತ್ತರಿಸಲಾಗುತ್ತದೆ: "ಇಲ್ಲಿ ಕಅ್‌ಬಾ ಎಂಬುದರ ಉದ್ದೇಶ 'ಮಸ್ಜಿದುಲ್ ಕಅ್‌ಬಾ' (ಕಅ್‌ಬಾ ಮಸೀದಿ). ಇದಕ್ಕಿರುವ ಪುರಾವೆ ಮೈಮೂನ(ﵩ)ರವರ ಹದೀಸ್. ಆ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

{الصَّلَاةُ فِيهِ أَفْضَلُ مِنْ أَلْفِ صَلَاةٍ فِيمَا سِوَاهُ إِلَّا مَسْجِدَ الْكَعْبَةِ }

رواه مسلم.

**"ಅಲ್ಲಿ (ಅಲ್‌ಮಸ್ಜಿದುನ್ನಬವೀಯಲ್ಲಿ) ನಿರ್ವಹಿಸುವ ಒಂದು ನಮಾಝ್ ಇತರ ಮಸೀದಿಗಳಲ್ಲಿ ನಿರ್ವಹಿಸುವ ಒಂದು ಸಾವಿರ ನಮಾಝ್‌ಗಿಂತಲೂ ಶ್ರೇಷ್ಠವಾಗಿದೆ. ಆದರೆ ಕಅ್‌ಬಾ ಮಸೀದಿಯಲ್ಲಿ ನಿರ್ವಹಿಸುವ ನಮಾಝ್‌ನ ಹೊರತು." [ಮುಸ್ಲಿಮ್ 1/1014]**

ಇತ್ತೀಚಿನ ಶಾಫಿಈ ವಿದ್ವಾಂಸರಲ್ಲಿ ಕೆಲವರು ಈ ಅಭಿಪ್ರಾಯವನ್ನು ಆರಿಸಿಕೊಂಡಿದ್ದಾರೆ. [ಅಅ್‌ಲಾಮು ಸ್ಸಾಜಿದ್ ಪುಟ 121]

**ಅಭಿಪ್ರಾಯ 2:**

ಅಲ್‌ಮಸ್ಜಿದುಲ್ ಹರಾಮ್ ಎಂದರೆ ಕಅ್‌ಬಾದ ಸುತ್ತಲೂ ಇರುವ ಮಸೀದಿ: ಇದು ಹಂಬಲೀಗಳ ಅಭಿಪ್ರಾಯ [ಅಲ್‌ಫುರೂಅ್ 1/600].

ಕೆಲವು ಶಾಫಿಈ ವಿದ್ವಾಂಸರು ಈ ಅಭಿಪ್ರಾಯವನ್ನು ಬಲಪಡಿಸಿದ್ದಾರೆ [ಅಲ್‌ಮಜ್ಮೂಅ್ 3/190]. ಆಧುನಿಕ ವಿದ್ವಾಂಸರ ಪೈಕಿ ಅಶ್ಶೈಖ್ ಅಲ್‌ಉಸೈಮೀನ್ ಈ ಅಭಿಪ್ರಾಯವನ್ನು ಆರಿಸಿಕೊಂಡಿದ್ದಾರೆ [ಅಲ್‌ಫತಾವಲ್ ಮಕ್ಕಿಯ್ಯಃ ಪುಟ 37].

ಇದಕ್ಕೆ ಇವರು ಮಂಡಿಸುವ ಪುರಾವೆಗಳು ಹೀಗಿವೆ:

**ಪುರಾವೆ 1:**

ಅಲ್ಲಾಹನ ಈ ವಚನಗಳು:

﴿وَلَا تُقَٰتِلُوهُمۡ عِندَ ٱلۡمَسۡجِدِ ٱلۡحَرَامِ﴾ [البقرة: 191] .

**“ಅಲ್‌ಮಸ್ಜಿದುಲ್ ಹರಾಮ್‌ನ ಬಳಿ ನೀವು ಅವರೊಂದಿಗೆ ಯುದ್ಧ ಮಾಡಬಾರದು.” [ಕುರ್‌ಆನ್ 2:191]**

﴿يَٰٓأَيُّهَا ٱلَّذِينَ ءَامَنُوٓاْ إِنَّمَا ٱلۡمُشۡرِكُونَ نَجَسٞ فَلَا يَقۡرَبُواْ ٱلۡمَسۡجِدَ ٱلۡحَرَامَ بَعۡدَ عَامِهِمۡ هَٰذَاۚ﴾ [التوبة: 28] .

**“ಮುಶ್ರಿಕ್‌ಗಳು ನಜಸ್ ಆಗಿದ್ದಾರೆ. ಆದ್ದರಿಂದ ಅವರು ಅವರ ಈ ವರ್ಷದ ಬಳಿಕ ಅಲ್‌ಮಸ್ಜಿದುಲ್ ಹರಾಮ್‌ನ ಬಳಿಗೆ ಸಮೀಪಿಸದಿರಲಿ.” [ಕುರ್‌ಆನ್ 9:28]**

ಅವರು ಹೇಳುತ್ತಾರೆ: “ಈ ಎರಡು ಆಯತ್‌ಗಳಲ್ಲಿರುವ ಅಲ್‌ಮಸ್ಜಿದುಲ್ ಹರಾಮ್ ಎಂಬುದರ ಉದ್ದೇಶವು ಕಅ್‌ಬಾದ ಸುತ್ತಲಿರುವ ಮಸೀದಿ.”

**ಪುರಾವೆ 2:**

ಅಲ್ಲಾಹನ ಈ ವಚನ:

﴿سُبۡحَٰنَ ٱلَّذِيٓ أَسۡرَىٰ بِعَبۡدِهِۦ لَيۡلٗا مِّنَ ٱلۡمَسۡجِدِ ٱلۡحَرَامِ إِلَى ٱلۡمَسۡجِدِ ٱلۡأَقۡصَا﴾ [الإسراء: 1].

**"ಅಲ್‌ಮಸ್ಜಿದುಲ್ ಹರಾಮ್‌ನಿಂದ ಅಲ್‌ಮಸ್ಜಿದುಲ್ ಅಕ್ಸಾಗೆ ರಾತ್ರಿಯಲ್ಲಿ ತನ್ನ ದಾಸನನ್ನು ಇಸ್ರಾಅ್ (ನಿಶಾಪ್ರಯಾಣ) ಮಾಡಿಸಿದ ಅಲ್ಲಾಹು ಪರಮಪಾವನನು." [ಕುರ್‌ಆನ್ 17:1]**

ಅವರು ಹೇಳುತ್ತಾರೆ: "ಪ್ರವಾದಿ(ﷺ)ರವರನ್ನು ಕಅ್‌ಬಾದ ಬಳಿಯಿರುವ ಹಿಜ್ರ್‌ನಿಂದ ಇಸ್ರಾಅ್ ಮಾಡಿಸಲಾಯಿತು."

ಮಸೀದಿಯ ಹೊರಗಿರುವ ಉಮ್ಮು ಹಾನಿಅ್(ರ)ರವರ ಮನೆಯಿಂದ ಇಸ್ರಾಅ್ ಮಾಡಿಸಲಾಯಿತೆಂದೂ ಹೇಳಲಾಗುತ್ತದೆ. ಈ ಕಾರಣದಿಂದಲೇ ಹರಮ್‌ನ ಯಾವುದೇ ಭಾಗದಲ್ಲಿ ನಮಾಝ್ ಮಾಡಿದರೂ ಅದಕ್ಕೆ ದುಪ್ಪಟ್ಟು ಪ್ರತಿಫಲವಿದೆಯೆಂದು ಹೇಳುವವರು ಈ ಘಟನೆಯನ್ನು ಆಧಾರವನ್ನಾಗಿ ಮಾಡುತ್ತಾರೆ. ಆದರೆ ವಾಸ್ತವವಾಗಿ, ಪ್ರವಾದಿ(ﷺ)ರವರನ್ನು ಎಲ್ಲಿಂದ ಇಸ್ರಾಅ್ ಮಾಡಿಸಲಾಯಿತು ಎಂಬ ಬಗ್ಗೆ ಉಲಮಾಗಳಿಗೆ ಭಿನ್ನಾಭಿಪ್ರಾಯವಿದೆ. ಆದರೆ ಅಲ್‌ಬುಖಾರೀಯಲ್ಲಿರುವ ಅನಸ್ ಇಬ್ನ್ ಮಾಲಿಕ್(ರ)ರವರ ಹದೀಸಿನಲ್ಲಿ ಹೇಳಲಾಗಿರುವ ಪ್ರಕಾರ ಪ್ರವಾದಿ(ﷺ)ರವರನ್ನು ಹತೀಮ್‌ನಿಂದ ಅಥವಾ ಹಿಜ್ರ್‌ನಿಂದ ಇಸ್ರಾಅ್ ಮಾಡಿಸಲಾಗಿದೆ. [ಅಲ್‌ಬುಖಾರೀ 7/201]

ಪುರಾವೆ 3:

ಇಮಾಮ್ ಮುಸ್ಲಿಮ್ ಮೈಮೂನಃ(ﷺ)ರಿಂದ ವರದಿ ಮಾಡಿದ ಹದೀಸ್:

مَنْ صَلَّى فِي مَسْجِدِ رَسُولِ اللَّهِ ﷺ فَإِنِّي سَمِعْتُ رَسُولَ اللَّهِ ﷺ يَقُولُ : {الصَّلَاةُ فِيهِ أَفْضَلُ مِنْ أَلْفِ صَلَاةٍ فِيمَا سِوَاهُ إِلَّا مَسْجِدَ الْكَعْبَةِ }

رواه مسلم.

**"ಯಾರಾದರೂ ಅಲ್ಲಾಹನ ರಸೂಲ್(ﷺ)ರವರ ಮಸೀದಿಯಲ್ಲಿ (ಅಲ್‌ಮಸ್ಜಿದು ನ್ನಬವೀಯಲ್ಲಿ) ನಮಾಝ್ ಮಾಡುವುದಾದರೆ (ಅವನಿಗೆ ದುಪ್ಪಟ್ಟು ಪ್ರತಿಫಲವಿದೆ). ಯಾಕೆಂದರೆ ಅಲ್ಲಾಹನ ರಸೂಲ್(ﷺ)ರವರು ಹೀಗೆ ಹೇಳಿದ್ದಾಗಿ ನಾನು ಆಲಿಸಿದ್ದೇನೆ: ಅಲ್ಲಿ (ಅಲ್‌ಮಸ್ಜಿದುನ್ನಬವೀಯಲ್ಲಿ) ನಿರ್ವಹಿಸುವ ಒಂದು ನಮಾಝ್ ಇತರ ಮಸೀದಿಗಳಲ್ಲಿ ನಿರ್ವಹಿಸುವ ಒಂದು ಸಾವಿರ ನಮಾಝ್‌ಗಿಂತಲೂ ಶ್ರೇಷ್ಠವಾಗಿದೆ. ಆದರೆ ಕಅ್‌ಬಾ ಮಸೀದಿಯಲ್ಲಿ ನಿರ್ವಹಿಸುವ ನಮಾಝ್‌ನ ಹೊರತು." [ಮುಸ್ಲಿಮ್ 1/1014]**

**ಪುರಾವೆ 4:**

ಅಬೂ ಹುರೈರಾ(ﷺ)ರವರ ಹದೀಸಿನಲ್ಲಿರುವಂತೆ ಮೂರು ಮಸೀದಿಗಳಿಗೇ ಹೊರತು ಯಾತ್ರೆ ಹೋಗಬಾರದು. ಆ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

{لَا تُشَدُّ الرِّحَالُ إِلَّا إِلَى ثَلَاثَةِ مَسَاجِدَ : مَسْجِدِي هَذَا وَمَسْجِدِ الْحَرَامِ وَمَسْجِدِ الْأَقْصَى} متفق عليه.

**"ಮೂರು ಮಸೀದಿಗಳಿಗೇ ಹೊರತು ಯಾತ್ರೆ ಹೊರಡಬಾರದು. ನನ್ನ ಮಸೀದಿ (ಅಲ್‌ಮಸ್ಜಿದುನ್ನಬವೀ), ಅಲ್‌ಮಸ್ಜಿದುಲ್ ಹರಾಮ್ ಮತ್ತು ಅಲ್‌ಮಸ್ಜಿದುಲ್ ಅಕ್ಸಾ." [ಅಲ್‌ಬುಖಾರೀ 3/63; ಮುಸ್ಲಿಮ್ 1/1014]**

ಅಲ್‌ಮಸ್ಜಿದುಲ್ ಹರಾಮ್‌ನ ಹೊರತು ಮಕ್ಕಾದಲ್ಲಿರುವ ಬೇರೆ ಮಸೀದಿಗಳಿಗೆ ಯಾತ್ರೆ ಕೈಗೊಳ್ಳಲು ಶರೀಅತ್ ಅನುಮತಿ ನೀಡಿಲ್ಲ. ಮಾತ್ರವಲ್ಲ, ಅದು ವಿರೋಧಿಸಲ್ಪಟ್ಟದ್ದೂ ಆಗಿದೆ. ದುಪ್ಪಟ್ಟು ಪ್ರತಿಫಲವನ್ನು ಹೊಂದಿರುವ ಮಸೀದಿಗಳಿಗೆ ಮಾತ್ರ ಯಾತ್ರೆ ಕೈಗೊಳ್ಳಲು ಅನುಮತಿ ನೀಡಲಾಗಿದೆ. [ಅಲ್‌ಫತಾವಲ್ ಮಕ್ಕಿಯ್ಯಃ ಪುಟ 31]

**ಪುರಾವೆ 5:**

ಇತರೆಲ್ಲ ಮಸೀದಿಗಳಂತೆ ಅಲ್‌ಮಸ್ಜಿದುಲ್ ಹರಾಮ್‌ನಲ್ಲಿ ಕೂಡ ಜನಾಬತ್ ಇರುವ ವ್ಯಕ್ತಿಗೆ ತಂಗಲು ಅನುಮತಿಯಿಲ್ಲ. ಆದರೆ ಅಲ್‌ಮಸ್ಜಿದುಲ್ ಹರಾಮ್‌ನ ಹೊರತು ಹರಮ್‌ನ ಇತರ ಭಾಗಗಳಲ್ಲಿ ತಂಗುವುದಕ್ಕೆ ವಿರೋಧವಿಲ್ಲ. ಆದ್ದರಿಂದ ಅಲ್‌ಮಸ್ಜಿದುಲ್ ಹರಾಮ್ ಎಂಬುದರ ಉದ್ದೇಶವು ಕಅ್‌ಬಾಲಯದ ಸುತ್ತಲಿರುವ ಮಸೀದಿ ಮಾತ್ರವಾಗಿದೆಯೇ ಹೊರತು ಸಂಪೂರ್ಣ ಹರಮ್ ಅಲ್ಲ.

**ಅಭಿಪ್ರಾಯ 3:**

ಅಲ್‌ಮಸ್ಜಿದುಲ್ ಹರಾಮ್ ಎಂಬುದರ ಉದ್ದೇಶ ಸಂಪೂರ್ಣ ಮಕ್ಕಾ ಹರಮ್: ಇದು ಹನಫೀಗಳ ಅಭಿಪ್ರಾಯ [ಬದಾಇಉಸ್ಸನಾಇಅ್ 2/301]. ಮತ್ತು ಮಾಲಿಕೀಗಳ ಅಭಿಪ್ರಾಯ [ಅಲ್‌ಜಾಮಿಉ

ಲಿ ಅಹ್ಕಾಮಿಲ್ ಕುರ್‌ಆನ್ 3/1275]. ಮತ್ತು ಶಾಫಿಈಗಳ ಅಭಿಪ್ರಾಯ [ಮುಗ್ನಿಲ್ ಮುಹ್ತಾಜ್ 6/67]. ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯ [ಅಲ್‌ಫತಾವಾ 22/207], ಇಬ್ನುಲ್ ಕಯ್ಯಿಮ್ [ಝಾದುಲ್ ಮಆದ್ 3/303] ಮತ್ತು ಇಬ್ನ್ ಬಾಝ್ [ಮಜ್ಮೂಅ್ ಫತಾವಾ ವ ಮಕಾಲಾತ್ 17/198] ಈ ಅಭಿಪ್ರಾಯವನ್ನು ಬಲಪಡಿಸಿದ್ದಾರೆ.

ಇವರು ನೀಡುವ ಪುರಾವೆಗಳು ಹೀಗಿವೆ:

**ಪುರಾವೆ 1:**

ಅಲ್ಲಾಹನ ಈ ವಚನ:

﴿يَٰٓأَيُّهَا ٱلَّذِينَ ءَامَنُوٓاْ إِنَّمَا ٱلۡمُشۡرِكُونَ نَجَسٞ فَلَا يَقۡرَبُواْ ٱلۡمَسۡجِدَ ٱلۡحَرَامَ بَعۡدَ عَامِهِمۡ هَٰذَاۚ﴾ [التوبة: 28] .

**"ಮುಶ್ರಿಕ್‌ಗಳು ನಜಸ್ ಆಗಿದ್ದಾರೆ. ಆದ್ದರಿಂದ ಅವರು ಅವರ ಈ ವರ್ಷದ ಬಳಿಕ ಅಲ್‌ಮಸ್ಜಿದುಲ್ ಹರಾಮ್‌ನ ಬಳಿಗೆ ಸಮೀಪಿಸದಿರಲಿ." [ಕುರ್‌ಆನ್ 9:28]**

ಎರಡನೆ ಅಭಿಪ್ರಾಯದವರು ಇದಕ್ಕೆ ಹೀಗೆ ಉತ್ತರ ನೀಡುತ್ತಾರೆ: "ಇಲ್ಲಿ ಅಲ್ಲಾಹು ಹೇಳಿರುವುದು 'ಅವರು ಸಮೀಪಿಸದಿರಲಿ' ಎಂದು. 'ಅವರು ಪ್ರವೇಶಿಸದಿರಲಿ' ಎಂದು ಹೇಳಿಲ್ಲ. ಮುಶ್ರಿಕನು ಹರಮ್‌ನ ಗಡಿಯ ಬಳಿಗೆ ಬರುವಾಗ ಅವನು ಮಸೀದಿಯನ್ನು ಸಮೀಪಿಸಿದವನಾಗುತ್ತಾನೆ. ಆದ್ದರಿಂದ ಈ ಆಯತ್ತಿನಲ್ಲಿ ಹೇಳಲಾಗಿರುವ 'ಅಲ್‌ಮಸ್ಜಿದುಲ್ ಹರಾಮ್' ಎಂಬುದರ ಉದ್ದೇಶವು ಕಅ್‌ಬಾದ ಸುತ್ತಲಿರುವ ಮಸೀದಿಯೇ ಹೊರತು ಸಂಪೂರ್ಣ ಹರಮ್ ಅಲ್ಲ."

ಇದಕ್ಕೆ ನೀಡಲಾದ ಪ್ರತ್ಯುತ್ತರವು ಹೀಗಿದೆ: "ಈ ಆಯತ್ತಿನಲ್ಲಿ ಹೇಳಲಾಗಿರುವ 'ಅಲ್‌ಮಸ್ಜಿದುಲ್ ಹರಾಮ್‌ನ ಬಳಿಗೆ ಸಮೀಪಿಸದಿರಲಿ' ಎಂಬುದರ ಉದ್ದೇಶವು ಮಸೀದಿಯನ್ನು ಸಮೀಪಿಸದಿರಲಿ ಎಂದಾಗಿದೆಯೆಂದು ನೀವು ಹೇಳುವ ಅಭಿಪ್ರಾಯವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಯಾಕೆಂದರೆ ಅವಿಶ್ವಾಸಿ ಹರಮ್‌ಗೆ ಹತ್ತಿರವಾಗುವುದನ್ನು ಮಸೀದಿಗೆ ಹತ್ತಿರವಾಗುವುದೆಂದು ಹೇಳಲಾಗದು; ವಿಶೇಷವಾಗಿ ಹಿಂದಿನ ಕಾಲದಲ್ಲಿ; ಅಂದರೆ ಆಧುನಿಕ ಸಂಪರ್ಕ ವ್ಯವಸ್ಥೆಗಳಿಲ್ಲದ ಕಾಲದಲ್ಲಿ. ಮಾತ್ರವಲ್ಲ, ಹರಮ್‌ನ ಕೆಲವೊಂದು ಗಡಿಗಳು ಮಸೀದಿಯಿಂದ ಸುಮಾರು 21 ಕಿ.ಮೀ. ದೂರದಲ್ಲಿದೆ. ಈ ಗಡಿಗಳಿಗೆ ಹತ್ತಿರವಾಗುವುದನ್ನು ಮಸೀದಿಗೆ ಹತ್ತಿರವಾಗುವುದೆಂದು ಹೇಗೆ ತಾನೇ ಹೇಳಲು ಸಾಧ್ಯ?

**ಪುರಾವೆ 2:**

ಅಲ್ಲಾಹನ ಈ ವಚನ:

﴿ إِنَّ ٱلَّذِينَ كَفَرُواْ وَيَصُدُّونَ عَن سَبِيلِ ٱللَّهِ وَٱلۡمَسۡجِدِ ٱلۡحَرَامِ ٱلَّذِي جَعَلۡنَٰهُ لِلنَّاسِ سَوَآءً ٱلۡعَٰكِفُ فِيهِ وَٱلۡبَادِۚ وَمَن يُرِدۡ فِيهِ بِإِلۡحَادِۭ بِظُلۡمٖ نُّذِقۡهُ مِنۡ عَذَابٍ أَلِيمٖ ٢٥ ﴾ [الحج: 25].

**"ಖಂಡಿತವಾಗಿಯೂ ಅವಿಶ್ವಾಸವಿಟ್ಟವರು ಮತ್ತು ಅಲ್ಲಾಹುವಿನ ಮಾರ್ಗದಿಂದ, ಹಾಗೂ ಸ್ಥಳೀಯರೂ, ಹೊರಗಿನವರೂ ಆಗಿರುವ ಎಲ್ಲ ಜನರಿಗೂ ಸಮಾನ ಹಕ್ಕಿರುವುದಾಗಿ ನಾವು ನಿಶ್ಚಯಿಸಿರುವ ಮಸ್ಜಿದುಲ್ ಹರಾಮ್‌ನಿಂದ, (ಅಲ್ಲಾಹನ ಪ್ರವಾದಿಯನ್ನು ಮತ್ತು ವಿಶ್ವಾಸಿಗಳನ್ನು) ತಡೆಯುವವರಾರೋ (ಅವರಿಗೆ ಯಾತನಾಮಯ ಶಿಕ್ಷೆಯಿದೆ). ಅಲ್ಲಿ ಯಾರಾದರೂ ಅನ್ಯಾಯವಾಗಿ ಏನನ್ನಾದರೂ ಮಾಡಲು ಬಯಸಿದರೆ**

**ಅವನಿಗೆ ನಾವು ಯಾತನಾಮಯವಾದ ಶಿಕ್ಷೆಯನ್ನು ಆಸ್ವಾದಿಸುವಂತೆ ಮಾಡುವೆವು." [ಕುರ್‌ಆನ್ 22:25]**

ಅವರು ಹೇಳುತ್ತಾರೆ: "ಈ ಆಯತ್ತಿನಲ್ಲಿ ಹೇಳಲಾಗಿರುವ 'ಅಲ್‌ಮಸ್ಜಿದುಲ್ ಹರಾಮ್' ಸಂಪೂರ್ಣ ಹರಮ್ ಆಗಿದೆ. ಎರಡನೆ ಅಭಿಪ್ರಾಯದವರು ಇದಕ್ಕೆ ಹೀಗೆ ಉತ್ತರಿಸುತ್ತಾರೆ: "ಈ ಆಯತ್ತಿನಲ್ಲಿ ಹೇಳಲಾಗಿರುವ 'ಅಲ್‌ಮಸ್ಜಿದುಲ್ ಹರಾಮ್' ಕಅ್‌ಬಾದ ಸುತ್ತಲಿರುವ ಮಸೀದಿಯಾಗಿದೆ. ಇದನ್ನೇ ಆಯತ್ತಿನ ಬಾಹ್ಯಾರ್ಥವು ಸೂಚಿಸುತ್ತದೆ." ಇಮಾಮ್ ಅನ್ನವವೀ [ತಹ್ಝೀಬುಲ್ ಅಸ್ಮಾಇ ವಲ್ಲುಗಾತ್ 9/250], ಇಬ್ನುಲ್ ಕಯ್ಯಿಮ್ [ಅಹ್ಕಾಮು ಅಹ್ಲಿ ದ್ದಿಮ್ಮಃ 1/189] ಮುಂತಾದವರು ಈ ಅಭಿಪ್ರಾಯವನ್ನು ಹೊಂದಿದ್ದಾರೆ.

**ಪುರಾವೆ 3:**

ಇಮಾಮ್ ಅಹ್ಮದ್ (3/323) ವರದಿ ಮಾಡಿದ ಸುದೀರ್ಘ ಹದೀಸಿನಲ್ಲಿರುವ ಪ್ರಕಾರ ಹುದೈಬಿಯ್ಯಃ ಸಂಧಿಯ ಸಮಯದಲ್ಲಿ ಪ್ರವಾದಿ(ﷺ)ರವರು ಹರಮ್‌ನ ಗಡಿಯೊಳಗೆ ಹೋಗಿ ನಮಾಝ್ ನಿರ್ವಹಿಸುತ್ತಿದ್ದರು. ಆದರೆ ಅವರ ವಾಸವು ಗಡಿಯ ಹೊರಭಾಗದಲ್ಲಾಗಿತ್ತು. ಇಮಾಮ್ ಅಶ್ಶಾಫಿಈ ಹೇಳುವ ಪ್ರಕಾರ ಹುದೈಬಿಯ್ಯಃದ ಕೆಲವು ಭಾಗಗಳು ಹರಮ್‌ನೊಳಗೆ ಮತ್ತು ಕೆಲವು ಭಾಗಗಳು ಹರಮ್‌ನ ಹೊರಗಿದೆ. [ಅಲ್‌ಉಮ್ಮ್ 2/341]

ಮಕ್ಕಾ ಹರಮ್‌ನ ಯಾವುದೇ ಭಾಗದಲ್ಲಿ ನಮಾಝ್ ಮಾಡಿದರೂ ಅದಕ್ಕೆ ದುಪ್ಪಟ್ಟು ಪ್ರತಿಫಲಗಳಿವೆಯೆಂದು ಹೇಳುವವರಿಗೆ ಈ ಹದೀಸ್ ಪ್ರಬಲ ಪುರಾವೆಯಾಗಿದೆ. ಇಬ್ನುಲ್ ಕಯ್ಯಿಮ್ ಹೇಳುತ್ತಾರೆ:

وَفِي هَذَا دَلَالَةٌ عَلَى أَنَّ مُضَاعَفَةَ الصَّلَاةِ بِمَكَّةَ تَتَعَلَّقُ بِجَمِيعِ الْحَرَمِ لَا يَخُصُّ بِهَا الْمَسْجِدُ الَّذِي هُوَ مَكَانُ الطَّوَافِ.

**“ನಮಾಝ್‌ಗೆ ದುಪ್ಪಟ್ಟು ಪ್ರತಿಫಲವಿದೆಯೆಂದು ಹೇಳಲಾಗಿರುವುದು ಸಂಪೂರ್ಣ ಹರಮ್‌ಗೆ ಅನ್ವಯಿಸುತ್ತದೆ ಮತ್ತು ಅದು ಕೇವಲ ತವಾಫ್ ಮಾಡುವ ಸ್ಥಳವಾಗಿರುವ ಮಸೀದಿಗೆ ಮಾತ್ರ ಅನ್ವಯವಲ್ಲ ಎಂಬುದಕ್ಕೆ ಇದರಲ್ಲಿ ಪುರಾವೆಯಿದೆ.” [ಝಾದುಲ್ ಮಆದ್ 3/303]**

ಎರಡನೆ ಅಭಿಪ್ರಾಯದವರು ಇದಕ್ಕೆ ಹೀಗೆ ಉತ್ತರಿಸುತ್ತಾರೆ: “ಪ್ರವಾದಿ(ﷺ)ರವರು ಹರಮ್‌ನ ಗಡಿಯೊಳಗೆ ನಮಾಝ್ ಮಾಡಿರುವುದು ಅಲ್ಲಿ ನಮಾಝ್ ಮಾಡುವುದು ಶ್ರೇಷ್ಠಕರ ಎಂಬ ಕಾರಣದಿಂದಾಗಿದೆಯೇ ಹೊರತು ದುಪ್ಪಟ್ಟು ಪ್ರತಿಫಲವಿದೆಯೆಂಬ ಕಾರಣದಿಂದಲ್ಲ. ದುಪ್ಪಟ್ಟು ಪ್ರತಿಫಲವಿರುವುದು ಕಅ್‌ಬಾಲಯ ವಿರುವ ಮಸೀದಿಯಲ್ಲಿ ನಮಾಝ್ ನಿರ್ವಹಿಸಿದರೆ ಮಾತ್ರ. “ಈ ವಿಷಯದಲ್ಲಿ ಯಾರೂ ಸಂಶಯ ಪ್ರಕಟಿಸಲಾರರೆಂದು” ಅರ್ರುಹೈಬಾನೀ ಹೇಳುತ್ತಾರೆ. [ಮತಾಲಿಬು ಉಲಿ ನ್ನುಹಾ 2/384]

ಇದಕ್ಕಿರುವ ಪ್ರತ್ಯುತ್ತರವು ಹೀಗಿದೆ: “ಹರಮ್‌ನಲ್ಲಿ ನಿರ್ವಹಿಸುವ ನಮಾಝ್‌ಗೆ ಶ್ರೇಷ್ಠತೆಯಿರುವುದು ಈ ದುಪ್ಪಟ್ಟು ಪ್ರತಿಫಲದಿಂದಲೇ. ಈ ಪ್ರತಿಫಲವು ಸಂಪೂರ್ಣ ಹರಮ್‌ಗೆ ಅನ್ವಯಿಸುತ್ತದೆ. ಈ ಪ್ರತಿಫಲವು ಇಲ್ಲದಿರುತ್ತಿದ್ದರೆ ಹರಮ್‌ನೊಳಗೆ ನಮಾಝ್ ಮಾಡುವುದಕ್ಕೆ ಇತರ ಸ್ಥಳಗಳಲ್ಲಿ ನಮಾಝ್ ಮಾಡುವುದಕ್ಕಿಂತ ಹೆಚ್ಚಿಗೆ ಯಾವುದೇ ಶ್ರೇಷ್ಠತೆಯಿರುತ್ತಿರಲಿಲ್ಲ.”

ಇಬ್ನ್ ಅಬ್ಬಾಸ್(ؓ)ರವರು ಹೇಳುತ್ತಾರೆ:

اَلْحَرَمُ كُلُّهُ هُوَ الْمَسْجِدُ الْحَرَامُ.

**"ಹರಮ್ ಸಂಪೂರ್ಣವಾಗಿ ಅಲ್‌ಮಸ್ಜಿದುಲ್ ಹರಾಮ್ ಆಗಿದೆ."** [**ಅಲ್‌ಫಾಕಿಹೀ 2/106**]. ಆದರೆ ಇದರ ಸನದ್‌ನಲ್ಲಿ ವಿಮರ್ಶೆಯಿದೆ.

ಈ ಅಭಿಪ್ರಾಯವು ಅತಾಲ್ [ಮುಸನ್ನಫ್ ಅಬ್ದುರ್ರಝ್ಝಾಕ್ 5/151; ಇಬ್ನ್ ಅಬೀ ಶೈಬಾ 1/4/392], ಮುಜಾಹಿದ್ [ಮುಸನ್ನಫ್ ಅಬ್ದುರ್ರಝ್ಝಾಕ್ 4/345; ಇಬ್ನ್ ಅಬೀ ಶೈಬಾ 1/4/392], ಕತಾದಃ [ತಫ್ಸೀರ್ ಅತ್ತಬರೀ 3/359] ಮುಂತಾದವರಿಂದಲೂ ವರದಿಯಾಗಿದೆ.

# ಹರಮ್‌ನಲ್ಲಿ ನಿರ್ವಹಿಸುವ ಇತರ ಸತ್ಕರ್ಮಗಳಿಗೆ ದುಪ್ಪಟ್ಟು ಪ್ರತಿಫಲವಿದೆಯೇ?

ದುಪ್ಪಟ್ಟು ಪ್ರತಿಫಲವಿರುವುದು ನಮಾಝ್‌ಗೆ ಮಾತ್ರವೇ? ಅಥವಾ ಅದು ಉಪವಾಸ, ದಾನಧರ್ಮ, ದಿಕ್ರ್ ಮೊದಲಾದ ಇತರ ಕರ್ಮಗಳಿಗೂ ಇವೆಯೇ? ಈ ವಿಷಯದಲ್ಲಿ ಉಲಮಾಗಳಿಗೆ ಎರಡು ಅಭಿಪ್ರಾಯಗಳಿವೆ.

**ಅಭಿಪ್ರಾಯ 1:**

ನಮಾಝ್‌ಗಿರುವಂತೆ ದುಪ್ಪಟ್ಟು ಪ್ರತಿಫಲ ಇತರ ಸತ್ಕರ್ಮಗಳಿಗಿಲ್ಲ: ಇದಕ್ಕೆ ಅವರು ಪುರಾವೆಯಾಗಿ ಹೇಳುವುದೇನೆಂದರೆ ದುಪ್ಪಟ್ಟು ಪ್ರತಿಫಲವಿದೆಯೆಂದು ಹೇಳಲಾಗಿರುವುದು ವಿಶೇಷವಾಗಿ ನಮಾಝ್‌ಗೆ ಮಾತ್ರ. ಆದ್ದರಿಂದ ಅದು ನಮಾಝ್‌ಗೆ ಮಾತ್ರ ಸೀಮಿತ. ಇತರ ಸತ್ಕರ್ಮಗಳಿಗೆ ದುಪ್ಪಟ್ಟು ಪ್ರತಿಫಲವಿದೆಯೆಂದು ಹೇಳಬೇಕಾದರೆ ಅದಕ್ಕೆ

ಪುರಾವೆಯ ಅಗತ್ಯವಿದೆ. ಇದು ಬಹುಸಂಖ್ಯಾತ ಉಲಮಾಗಳ ಅಭಿಪ್ರಾಯ.

2. ನಮಾಝ್‌ಗಿರುವಂತೆ ದುಪ್ಪಟ್ಟು ಪ್ರತಿಫಲ ಇತರ ಸತ್ಕರ್ಮಗಳಿಗೂ ಇದೆ: ಅಲ್‌ಹಸನ್ ಅಲ್‌ಬಸ್ರೀ ಈ ಅಭಿಪ್ರಾಯವನ್ನು ಹೊಂದಿದ್ದಾರೆ. ಅವರು ಹೇಳುತ್ತಾರೆ: "ಯಾರಾದರೂ ಹರಮ್‌ನಲ್ಲಿ ಉಪವಾಸ ಆಚರಿಸಿದರೆ ಅವನಿಗೆ ನೂರು ಸಾವಿರ (ಒಂದು ಲಕ್ಷ) ದಿನ ಉಪವಾಸ ಆಚರಿಸಿದ ಪುಣ್ಯವಿದೆ. ಯಾರಾದರೂ ಹರಮ್‌ನಲ್ಲಿ ಒಂದು ದಿರ್ಹಮ್ ದಾನ ಮಾಡಿದರೆ ಅವನಿಗೆ ನೂರು ಸಾವಿರ (ಒಂದು ಲಕ್ಷ) ದಿರ್ಹಮ್ ದಾನ ಮಾಡಿದ ಪುಣ್ಯವಿದೆ. [ಅಖ್ಬಾರ್ ಮಕ್ಕಾ 2/292]

ಈ ಅಭಿಪ್ರಾಯವನ್ನು ಹೊಂದಿರುವವರು ಇದಕ್ಕೆ ಮಂಡಿಸುವ ಪುರಾವೆ ಇಬ್ನ್ ಅಬ್ಬಾಸ್(ﷻ)ರಿಂದ ಇಬ್ನ್ ಮಾಜ ವರದಿ ಮಾಡಿದ ಹದೀಸ್. ಆ ಹದೀಸಿನಲ್ಲಿ ಅಲ್ಲಾಹನ ರಸೂಲ್(ﷺ)ರವರು ಹೇಳುತ್ತಾರೆ:

{مَنْ أَدْرَكَ رَمَضَانَ بِمَكَّةَ فَصَامَ وَقَامَ مِنْهُ مَا تَيَسَّرَ لَهُ كَتَبَ اللَّهُ لَهُ مِئَةَ أَلْفِ شَهْرِ رَمَضَانَ فِيمَا سِوَاهَا...} رواه ابن ماجه.

**"ಯಾರಿಗಾದರೂ ಮಕ್ಕಾದಲ್ಲಿ ರಮದಾನ್ ಲಭ್ಯವಾಗಿ, ಅವನು ಅದರಲ್ಲಿ ಉಪವಾಸ ಆಚರಿಸಿದರೆ, ಮತ್ತು ತನಗೆ ಸಾಧ್ಯವಾಗುವಷ್ಟು ರಾತ್ರಿ ನಮಾಝ್ ನಿರ್ವಹಿಸಿದರೆ, ಅಲ್ಲಾಹು ಅವನಿಗೆ ಇತರ ಸ್ಥಳಗಳಲ್ಲಿ ನಿರ್ವಹಿಸಿದ ನೂರು ಸಾವಿರ (ಒಂದು ಲಕ್ಷ) ರಮದಾನ್ ತಿಂಗಳ ಪುಣ್ಯವನ್ನು ದಾಖಲಿಸುವನು."** [ಇಬ್ನ್ ಮಾಜ **3117**]

ಇದರ ಸನದ್‌ನಲ್ಲಿ ಅಬ್ದುರ್ರಹೀಮ್ ಇಬ್ನ್ ಝೈದ್ ಅಲ್‌ಅಮ್ಮೀ ಎಂಬ ವ್ಯಕ್ತಿಯಿದ್ದಾರೆ. ಈ ವ್ಯಕ್ತಿ ಹದೀಸಿನ ವಿಷಯದಲ್ಲಿ ತಿರಸ್ಕೃತರು.

ಅಲ್‌ಅಲ್ಬಾನೀ ಈ ಹದೀಸನ್ನು ಮೌದೂಅ್ (ಕೃತಕವಾಗಿ ನಿರ್ಮಿಸಿದ್ದು) ಎಂದಿದ್ದಾರೆ. [ಸಿಲ್ಸಿಲತು ದ್ದಈಫಃ 2/232]. ಆದ್ದರಿಂದ ಈ ಹದೀಸ್ ಪುರಾವೆಗೆ ಯೋಗ್ಯವಲ್ಲ.

ಈ ಅಭಿಪ್ರಾಯದವರು ಬೇರೆ ಕೆಲವು ಹದೀಸ್‌ಗಳನ್ನು ಮತ್ತು ಅಸರ್‌ಗಳನ್ನು ಪುರಾವೆಯಾಗಿ ಮಂಡಿಸುತ್ತಾರೆ. ಆದರೆ ಅವುಗಳಲ್ಲೊಂದೂ ಪುರಾವೆಗೆ ಯೋಗ್ಯವೆಂಬ ಸ್ಥಾನಕ್ಕೆ ತಲುಪುವುದಿಲ್ಲ.

ಒಟ್ಟಿನಲ್ಲಿ, ನಮಾಝ್‌ಗಿರುವಂತೆ ಹರಮ್‌ನಲ್ಲಿ ನಿರ್ವಹಿಸುವ ಎಲ್ಲ ಸತ್ಕರ್ಮಗಳಿಗೂ ದುಪ್ಪಟ್ಟು ಪ್ರತಿಫಲವಿದೆಯೆಂಬುದಕ್ಕೆ ದೃಢಪಟ್ಟ ಯಾವುದೇ ಪುರಾವೆಯೂ ಇಲ್ಲ.

ಆದರೆ ಹರಮ್‌ನಲ್ಲಿ ನಿರ್ವಹಿಸುವ ಸತ್ಕರ್ಮಗಳು ಹರಮ್‌ನ ಹೊರಗೆ ನಿರ್ವಹಿಸುವ ಸತ್ಕರ್ಮಗಳಿಗಿಂತಲೂ ಶ್ರೇಷ್ಠವಾಗಿದೆ. ಇದು ಹರಮ್‌ಗೆ ಇತರ ಸ್ಥಳಗಳಿಗಿಂತ ಹೆಚ್ಚು ಶ್ರೇಷ್ಠತೆಯಿರುವ ಕಾರಣದಿಂದಾಗಿದೆ. [ನೋಡಿ: ಅಲ್‌ಫುರೂಅ್ 1/600]

ಇಬ್ನ್ ಬಾಝ್ ಹೇಳುತ್ತಾರೆ:

وَبَقِيَّةُ الْأَعْمَالِ الصَّالِحَةِ تُضَاعَفُ – أَيْ فِي الْحَرَمِ – وَلَكِنْ لَمْ يَرِدْ فِيهَا حَدٌّ مَحْدُودٌ ، إِنَّمَا جَاءَ الْحَدُّ وَالْبَيَانُ فِي الصَّلَاةِ ، أَمَّا بَقِيَّةُ الْأَعْمَالِ الصَّالِحَةِ كَالصَّوْمِ وَالْأَذْكَارِ وَقِرَاءَةِ الْقُرْآنِ وَالصَّدَقَاتِ فَلَا أَعْلَمُ فِيهَا نَصًّا ثَابِتًا يَدُلُّ عَلَى تَضْعِيفٍ مُحَدَّدٍ.

**"ಹರಮ್‌ನಲ್ಲಿ ನಿರ್ವಹಿಸುವ ಇತರ ಸತ್ಕರ್ಮಗಳಿಗೆ ದುಪ್ಪಟ್ಟು ಪ್ರತಿಫಲವಿದೆ. ಆದರೆ ಅದಕ್ಕೊಂದು ನಿರ್ದಿಷ್ಟ ಮಿತಿಯು ಶರೀಅತ್ತಿನಲ್ಲಿ**

**ಬಂದಿಲ್ಲ. ಮಿತಿ ಮತ್ತು ವಿವರಣೆಯು ಬಂದಿರುವುದು ನಮಾಝ್‌ನ ವಿಷಯದಲ್ಲಿ ಮಾತ್ರ. ಉಪವಾಸ, ದಿಕ್ರ್, ಕುರ್‌ಆನ್ ಪಾರಾಯಣ, ದಾನಧರ್ಮ, ಮೊದಲಾದ ಇತರ ಸತ್ಕರ್ಮಗಳ ಬಗ್ಗೆ ಹೇಳುವುದಾದರೆ, ಅವುಗಳಿಗೆ ದುಪ್ಪಟ್ಟು ಮಿತಿಯನ್ನು ಸೂಚಿಸುವ ದೃಢಪಟ್ಟ ಪಠ್ಯವನ್ನು ನಾನು ಅರಿತಿಲ್ಲ."** [ಮಜ್ಮೂಉ ಫತಾವಾ ವ ಮಕಾಲಾತ್ 17/198]. ಹೆಚ್ಚು ಬಲ್ಲವನು ಅಲ್ಲಾಹು.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أجْمَعِين .

*********

# ಪರಿವಿಡಿ


| م | العنوان | الصفحة |
|---|---|---|
| 1 | ಪ್ರಸ್ತಾವನೆ | **1** |
| 2 | ಹರಮ್ ಮತ್ತು ಅದರ ಹೆಸರುಗಳು | **1** |
| 3 | ಎರಡು ಹರಮ್‌ಗಳು | **2** |
| 4 | ಮಕ್ಕಾ ಹರಮ್ ಮತ್ತು ಅಲ್‌ಮಸ್ಜಿದುಲ್ ಹರಾಮ್‌ನ ಮಧ್ಯೆಯಿರುವ ವ್ಯತ್ಯಾಸ | **2** |
| 5 | ಹರಮ್‌ನ ಗಡಿಗಳು | **3** |
| 6 | ಆಧುನಿಕ ರಸ್ತೆಗಳ ಮೂಲಕ ಮಕ್ಕಾ ಹರಮ್‌ನ ಗಡಿಗಳು | **6** |
| 7 | ಮಕ್ಕಾ ಹರಮ್‌ನ ಶ್ರೇಷ್ಠತೆ | **7** |
| 8 | ಭೂಮಿಯ ಮೇಲೆ ಎಷ್ಟು ಹರಮ್‌ಗಳಿವೆ? | **13** |
| 9 | ಹರಮ್‌ನಲ್ಲಿ ನಿರ್ವಹಿಸುವ ನಮಾಝ್‌ಗೆ ದುಪ್ಪಟ್ಟು ಪ್ರತಿಫಲವಿದೆ | **14** |
| 10 | ಮಕ್ಕಾ ಹರಮ್‌ನಲ್ಲಿ ನಿರ್ವಹಿಸುವ ನಮಾಝ್‌ಗಿರುವ ದುಪ್ಪಟ್ಟು ಪ್ರತಿಫಲ | **18** |
| 11 | ಹರಮ್‌ನಲ್ಲಿ ನಿರ್ವಹಿಸುವ ಇತರ ಸತ್ಕರ್ಮಗಳಿಗೆ ದುಪ್ಪಟ್ಟು ಪ್ರತಿಫಲವಿದೆಯೇ? | **29** |

IslamHouse.com